## 2

# ಯೋನಾತಾನ: ಅವಶ್ಯಕತೆಯಿರುವಾಗ ಹತ್ತಿರವಿರುವ ಸ್ನೇಹಿತ

## (1 ಸಮುವೇಲ 17-23; 2 ಸಮುವೇಲ 1)

"ಸ್ನೇಹವು" ಆಂಗ್ಲ ಭಾಷೆಯಲ್ಲಿನ ಒಂದು ಅಮೂಲ್ಯವಾದ ಪದವಾಗಿದೆ. ರೋಬರ್ಟ್ ಲೂಯಿ ಸ್ಟೀವನಸನ್, "ನಿಮಗೆ ನೀವೆ ಕೊಟ್ಟು ಕೊಳ್ಳುವ ಬಹುಮಾನ ... ಒಬ್ಬ ಸ್ನೇಹಿತ" ಎಂದು ಹೇಳಿದ್ದಾರೆ.[1] ಮೇರಿ ಮಿಟ್‌ಫೋರ್ಡ್ ಹೀಗೆ ಬರೆಯುತ್ತಾರೆ, "ನನ್ನ ಅನುದಿನದ ಆಹಾರಕ್ಕಿಂತ ನಾನು ನನ್ನ ಸ್ನೆಹಿತರಿಗಾಗಿ ದೇವರಿಗೆ ಉಪಕಾರ ಹೇಳುತ್ತೇನೆ - ಯಾಕೆಂದರೆ ಸ್ನೇಹವು ಹೃದಯದ ಆಹಾರವಾಗಿದೆ." ಸಿಸೆರೋ ಅವರ ಪ್ರಕಾರ, ಸ್ನೇಹವನ್ನು ತೆಗೆದು ಬಿಟ್ಟರೆ, ಜಗತ್ತಿನಿಂದ ಸೂರ್ಯನನ್ನು ತೆಗೆದು ಬಿಟ್ಟಂತೆ. ಪ್ರಾಯೋಗಿಕ ಪುಸ್ತಕವಾದ ಜ್ಞಾನೋಕ್ತಿಗಳಲ್ಲಿ ಸ್ನೇಹದ ಕುರಿತು ಅನೇಕ ಸಂಗತಿಗಳಿವೆ: "ಮಿತ್ರನ ಪ್ರೀತಿಯು ನಿರಂತರ" (ಜ್ಞಾನೋಕ್ತಿ 17:17). "ಸಹೋದರರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನುಂಟು" (ಜ್ಞಾನೋಕ್ತಿ 18:24). "ನಿನಗೂ ನಿನ್ನ ತಂದೆಗೂ ಮಿತ್ರನಾದವನನ್ನು ಬಿಡಬೇಡ" (ಜ್ಞಾನೋಕ್ತಿ 27:10).

ನಾನು "ಮಿತ್ರತ್ವ" ಎಂದು ಹೇಳುವಾಗ, ನೀವು ಯಾರ ಕುರಿತು ಆಲೋಚಿಸುತ್ತೀರಿ? ಬಹುಶಃ ನೀವು ಬಹು ಕಾಲದಿಂದ ತಿಳಿದಿರುವ, ನೀವು ಅವರಿಗೆ ಹತ್ತಿರವಾಗಿರುವ ಯಾರನ್ನೋ ಕುರಿತು ಆಲೋಚಿಸುತ್ತಿರಬಹುದು. ನಿಮ್ಮ ಮನಸ್ಸಿನಲ್ಲಿ ಬರುತ್ತಿರುವ ಅವರ ಕರುಣೆ ಮತ್ತು ಕಳಕಳಿಯು ನಿಮ್ಮ ಜೀವನದಲ್ಲಿ ತಿರುವನ್ನು ತಂದಿರಬಹುದು. ನಿಮ್ಮ ಕುಟುಂಬದ ಸದಸ್ಯರೊಬ್ಬರು ನಿಮ್ಮ ರಕ್ತ ಸಂಬಂಧಿಗಳಿಗಿಂತಲೂ ನಿಮಗೆ ಹತ್ತಿರವಾಗಿರಬಹುದು. ನಾನು "ಮಿತ್ರ" ಎಂಬ ಪದವನ್ನು ಕೇಳಿದಾಗ ನಾನು ನನ್ನ ಪತ್ನಿಯ ಕುರಿತು ಮೊದಲು ಆಲೋಚಿಸುತ್ತೇನೆ, ಜೋ - ಭೂಮಿಯ ಮೇಲೆ ನನ್ನ ಅತಿ ಹತ್ತಿರದ ಸ್ನೇಹಿತೆ (ಪರಮಗೀತೆ 5:16). ನಂತರ ನಾನು ನನ್ನ ತಂದೆ ತಾಯಿಗಳನ್ನು, ನನ್ನ ಸಹೋದರ ಮತ್ತು ಇತರರನ್ನು ಕುರಿತು ಆಲೋಚಿಸುತ್ತೇನೆ. ನಂತರ ನಾನು ಜಗತ್ತಿನಾದ್ಯಂತ ನಾವು ಮಾಡಿಕೊಂಡಿರುವ ಸ್ನೇಹಿತರನ್ನು ಕುರಿತು ಆಲೋಚಿಸುತ್ತೇನೆ. ನನಗೆ ಪರಲೋಕದ ಆನಂದದಂತೆ ಇರುವ ಸಂಗತಿಯೆಂದರೆ, ನಮ್ಮ ಎಲ್ಲಾ ಸ್ನೇಹಿತರನ್ನು ಒಂದೇ ಸಮಯದಲ್ಲಿ, ಒಂದೇ ಸ್ಥಳದಲ್ಲಿ ಸೇರಿಸಿ, ಎಲ್ಲರಿಗಿಂತ ಹೆಚ್ಚಿನ ಸ್ನೇಹಿತನ ಪ್ರೀತಿಯಿಂದ ಸುತ್ತವರಿಯಲ್ಪಡುವದು.

ದುಃಖಕರವಾಗಿ, ನಾನು "ಸ್ನೇಹ" ಎಂಬ ಪದವನ್ನು ಹೇಳಿದ ಕೂಡಲೇ ಕೆಲವರು ಯಾರನ್ನು ಕುರಿತು ಆಲೋಚಿಸುವದಿಲ್ಲ.[2] ಇದು ನಿಮ್ಮ ಪರಿಸ್ಥಿತಿಯಾಗಿದ್ದರೆ, ನನ್ನ ಹೃದಯವು ನಿಮಗಾಗಿ ವೇದನೆ ಪಡುತ್ತದೆ. ಈ ಪಾಠವನ್ನು ಅಧ್ಯಯನ ಮಾಡುತ್ತಿರುವ ಎಲ್ಲರಿಗೂ ಇದು ಸಹಾಯಕವಾಗುತ್ತದೆಂದು ನೆನೆಸುತ್ತೇನೆ; ನೀನು ಮಿತ್ರರಿಲ್ಲದ ಅನುಭವದಲ್ಲಿದ್ದರೇ, ನಿಮಗೆ ಸಹಾಯವಾಗುವಂತೆ ಏನಾದರೂ ಹೇಳಲಿ ಎಂದು ನಿರೀಕ್ಷಿಸುತ್ತೇನೆ.

ನಾನು ಈ ಪ್ರಶ್ನೆಯನ್ನು ಬದಲಾಯಿಸುತ್ತೇನೆ. ನಾನು *"ಸ್ನೇಹ ಮತ್ತು ಸತ್ಯವೇದ"* ಎಂಬ ಪದಗಳನ್ನು ಹೇಳಿದರೆ, ನೀವು ಯಾರ ಕುರಿತು ಆಲೋಚಿಸುತ್ತೀರಿ? ಬಹುಶಃ ನೀವು ಯೋನಾತಾನ ಮತ್ತು ದಾವೀದನ ಕುರಿತು ಆಲೋಚಿಸಿರಬಹುದು. ನಮ್ಮ ಮಕ್ಕಳ ತರಗತಿಗಳು

ಸ್ನೇಹದ ಕುರಿತು ಸ್ನೆಹಿತ ತತ್ವವನ್ನು ನಿರೂಪಿಸಲು ಬೈಬಲ್‌ನಲ್ಲಿನ ಅರಸನಾದ ಸೌಲನ ಮಗ ಮತ್ತು ಬೇತ್ಲೆಹೇಮಿನ ಕುರಿ ಕಾಯುವ ಹುಡುಗನ ಕತೆಯನ್ನು ಹೇಳಲಾಗುತ್ತದೆ.

ಈ ಪಾಠದಲ್ಲಿ ಮತ್ತು ಮುಂದಿನದರಲ್ಲಿ, ದಾವೀದನು ತಕ್ಷಣ ಪ್ರಸಿದ್ಧ ವ್ಯಕ್ತಿಯಾದದ್ದನ್ನು ಮತ್ತು ಅಷ್ಟೆ ಬೇಗನೆ ದೇಶ ಭ್ರಷ್ಟನಾಗಿ ಅಲೆದಾಡುತ್ತಿರುವ ವ್ಯಕ್ತಿಯಾಗಿ ನೋಡುತ್ತೇವೆ. ನಾವು ಈ ಅಧ್ಯಯನದಲ್ಲಿ ನೋಡುತ್ತಿರುವ ವಿಷಯವೆಂದರೆ, ಈ ಭಾಗದಲ್ಲಿ ಅಡಕವಾಗಿರುವ ಒಂದು ಬಂಗಾರದ ಎಳೆ: ದಾವೀದನಿಗೋಸ್ಕರ ಯೋನಾತಾನನಿಗಿದ್ದ ಪ್ರೀತಿಯ ಕತೆ. ನಿಜ ವಾದ ಸ್ನೇಹದ ಗುಣವನ್ನು ನಾವು ಕಲಿಯೋಣ.

## ಸ್ನೇಹದ ಬದ್ಧತೆ (1 ಸಮುವೇಲ 17:55-18:3)

ಗೊಲ್ಯಾತನ ಮೇಲೆ ದಾವೀದನ ಜಯವನ್ನು ನೆನಪು ಮಾಡಿಕೊಳ್ಳುವಂತೆ, 1 ಸಮುವೇಲ 17ರ ಕೊನೆಯ ನಾಲ್ಕು ವಚನಗಳಲ್ಲಿ, ಇಂದಿನ ಪಾಠದ ಹಿನ್ನೆಲೆ ಕೊಡಲಾಗಿದೆ ... ಸೌಲನನ್ನು ಬಿಟ್ಟು ದಾವೀದನು ದೈತ್ಯನನ್ನು ಎದುರಿಸಲು ಹೋದಾಗ, ಅರಸನು ತನ್ನ ಸೇನಾಪತಿಯನ್ನು ಕೇಳಿದನು, "ಅಬ್ನೇರನೇ, ಈ ಹುಡುಗನು ಯಾರ ಮಗನು?" (17:55). ದಾವೀದನ ಜಯದ ನಂತರ, ಅಬ್ನೇರನು ಕುರಿ ಕಾಯುವ ಹುಡುಗನನ್ನು ಸೌಲ ಮುಂದೆ ಕರೆತಂದನು. ದಾವೀದನು ಗೊಲ್ಯಾತನ ತಲೆಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ನಿಂತಾಗ, ಅರಸನು, "ನೀನು ಯಾರ ಮಗನು, ಯೌವನಸ್ಥನೇ?" (17:58ಎ)[3] ಎಂದು ಪ್ರಶ್ನಿಸಿದನು. ದಾವೀದನು, "ಬೇತ್ಲೆಹೇಮಿನವನೂ ನಿನ್ನ ಸೇವಕನೂ ಆದ ಇಷಯನ ಮಗನು" (17:58ಬಿ). ಸೌಲನು ದಾವೀದನು ಯಾರೆಂದು ಕೇಳಲಿಲ್ಲ ಆದರೆ ತಂದೆ ಯಾರೆಂದು ವಿಚಾರಿಸದ್ದನ್ನು ಗಮನಿಸಿರಿ.[4] ದಾವೀದನನ್ನು ತನ್ನ ಮನೆಯಲ್ಲಿ ಇಟ್ಟು ಕೊಳ್ಳುವದಕ್ಕೆ ದಾವೀದನ ತಂದೆಯಿಂದ ಅನುಮತಿ ಪಡೆಯಬೇಕೆಂದು ಬಹುಶಃ ಸೌಲನು ಕೇಳಿರಬಹುದು. "ಅಂದಿನಿಂದ ಸೌಲನು ದಾವೀದನನ್ನು ಅವನ ತಂದೆಯ ಮನೆಗೆ ಹೋಗಗೊಡದೆ ತನ್ನ ಬಳಿಯಲ್ಲೆ ಇಟ್ಟುಕೊಂಡನು" (18:2).[5]

ಸೌಲನು ದಾವೀದನು ತನ್ನ ಅರಮನೆಯಲ್ಲಿರುವದಕ್ಕೆ ಆಹ್ವಾನಿಸುವದನ್ನು, ಅರಸನ ಬದಿಯಲ್ಲಿ ನಿಂತಿದ್ದ ಒಬ್ಬ ಯೌವನಸ್ಥನು ಕೇಳಿಸಿಕೊಂಡನು. ಅವನ ಹೆಸರು ಯೋನಾತಾನ.[6] ಅವನು ಸೌಲನ ಹಿರೀ ಮಗನು ಮತ್ತು ಸಿಂಹಾಸನಕ್ಕೆ ಅವನೇ ಬಾಧ್ಯಸ್ಥನು. ಅವನು ಅರಸನಿಗೆ ಬಲಗೈಯಾಗಿದ್ದನು, ಇಸ್ರಾಯೇಲಿನ ಎರಡೂ ಬದಿಯಲ್ಲಿ ವೈರಿ ಕುಲಗಳ ಮಧ್ಯದ ಅನೇಕ ಯುದ್ಧಗಳಲ್ಲಿ ತನ್ನನ್ನು ಸಾಬೀತು ಪಡಿಸಿಕೊಂಡ ಒಬ್ಬ ಧೈರ್ಯಶಾಲಿಯಾದ ಯೋಧನಾಗಿದ್ದನು (1 ಸಮುವೇಲ 13; 14). ಇಸ್ರಾಯೇಲ್ಯರ ಹೃದಯಗಳಲ್ಲಿ ಅವನೊಬ್ಬ ವಿಶೇಷ ವ್ಯಕ್ತಿಯಾಗಿದ್ದನು (1 ಸಮುವೇಲ 14:45).

ದಾವೀದನು ದೈತ್ಯನನ್ನು ಎದರಿಸುವದನ್ನು ಮತ್ತು ತನ್ನ ತಂದೆಯನ್ನು ತಗ್ಗಿನ ಪಕ್ಕದಲ್ಲಿದ್ದ ಬೆಟ್ಟದ ಮೇಲೆ ಮುಖಾಮುಖಿಯಾಗಿ ಎದುರಿಸಿದ್ದನ್ನು ಯೋನಾತಾನನು ಗಮನಿಸಿದಾಗ ಏನೋ ಆಯಿತು - ಒಂದು ಅಸಾಮಾನ್ಯವಾದ ಮತ್ತು ಸುಂದರವಾದ ಸಂಗತಿ. "ದಾವೀದ ನು ಸೌಲನೊಡನೆ ಮಾತಾಡಿ ತೀರಿಸಿದ ಮೇಲೆ ಯೋನಾತಾನನ ಪ್ರಾಣವು ದಾವೀದನ ಪ್ರಾಣದೊಡನೆ ಒಂದಾಯಿತು. ಅವನು ಇವನನ್ನು ತನ್ನ ಪ್ರಾಣದಂತೆಯೇ ಪ್ರೀತಿಸ ತೊಡಗಿದನು" (18:1). ಇಬ್ರಿಯ ಪದ "ಒಂದಾಯಿತು" ಅಂದರೆ ನಿಜವಾಗಿಯೂ "ಹೆಣೆಯಲ್ಪಟ್ಟಿತು" ತಕ್ಷಣವೇ, ಅವನ ಪ್ರಾಣವು ಹೆಣೆದುಕೊಂಡಿತು, ಆದರೆ ಅದಕ್ಕಿಂತಲೂ ಹೆಚ್ಚಾಗಿ, ಒಂದು ಬಂಧ ಸ್ಥಾಪಿತವಾಯಿತು. NIV ಹೀಗೆ ಹೇಳುತ್ತದೆ, "ಯೋನಾತನನು ದಾವೀದನ ಆತ್ಮದೊಂದಿಗೆ ಒಂದಾದನು." ಜಗತ್ತಿಗೆ ತಿಳಿದುಬಂದಿರುವ ಅತ್ಯಮೂಲ್ಯವಾದ ಮಿತ್ರತ್ವವು ಅಲ್ಲಿ ಜನಿಸಿತು.

ಅದು ಅರ್ಥವಾಗಲಾರದ ಸಂಬಂಧವಾಗಿತ್ತು. ಮೊದಲಿಗೆ, ಅವರ ವಯಸ್ಸಿನಲ್ಲಿ ಸುಮಾರು ಇಪ್ಪತ್ತು ವರ್ಷಗಳ ಅಂತರವಿತ್ತು. ದಾವೀದನು ಜನಿಸಿದಾಗ ಯೋನಾತಾನನು

ನುರಿತ ಯೋಧನಾಗಿದ್ದನು. ಎರಡನೇಯದಾಗಿ, ಅವರ ಸಾಮಾಜಿಕ ಸ್ಥಿತಿಯಲ್ಲಿ ವ್ಯತ್ಯಾಸವಿತ್ತು. ಸಿಂಹಾಸನಕ್ಕೆ ಮುಂದಿನ ಉತ್ತರಾಧಿಕಾರಿ ಯೋನಾತಾನನಾಗಿದ್ದನು, ದಾವೀದನು ಬೇತ್ಲೆಹೇಮಿನ ಬಡ ಒಕ್ಕಲಿಗನ ಮಗನಾಗಿದ್ದನು. ಸಮಾನ ಹೃದಯದ ವ್ಯಕ್ತಿಗಳು ಭೇಟಿಯಾಗುವಾಗ, ಅಂಥ ಹೊರಗಿನ ವಿವರಣೆಗೆ ಪ್ರಾಮುಖ್ಯತೆ ಇರುವದಿಲ್ಲ. ಇಂದಿನ ಸಮಾಜದಲ್ಲಿ, ನಾವು ಅನೇಕ ಪೀಳಿಗೆಯ ಅಂತರ ಮತ್ತು ಸಾಮಾಜಿಕ ಅಂತರವನ್ನು ಸೃಷ್ಟಿಸಿದ್ದೇವೆ. ನಾವು ಕೇವಲ ಸಮವಯಸ್ಕರಲ್ಲಿಯೇ ಮತ್ತು ನಮ್ಮ ಹಾಗೆಯೇ ಇರುವವರನ್ನು ಮಿತ್ರರನ್ನಾಗಿ ಹುಡುಕಿಕೊಂಡರೆ, ಎಂಥ ಅಮೂಲ್ಯ ಸ್ನೇಹ ವನ್ನು ನಾವು ತಪ್ಪಿಸಿಕೊಳ್ಳುತ್ತೇವೆ!

ಯೋನಾತಾನನು ಮತ್ತು ದಾವೀದರು ಮಾಡಿಕೊಂಡ *ಪ್ರತಿಷ್ಠೆಯನ್ನು* ಗಮನಿಸಿದ್ದರಿಂದ "ಯೋನಾತಾನನು ದಾವೀದನನ್ನು ತನ್ನ ಪ್ರಾಣದಂತೆಯೇ ಪ್ರೀತಿಸಿದ್ದರಿಂದ ಅವನೊಡನೆ ಒಡಂಬಡಿಕೆ ಮಾಡಿಕೊಂಡನು" (18:3). ಒಂದು ಒಡಂಬಡಿಕೆಯು ಎರಡು ಪಂಗಡಗಳ ಮಧ್ಯದ ಒಪ್ಪಂದವಾಗಿದೆ (1 ಸಮುವೇಲ 18:3 ಮತ್ತು 1 ಸಮುವೇಲ 20:16 ಹೋಲಿಸಿರಿ). ಈ ಒಡಂಬಡಿಕೆಯ ಯೋನಾತಾನನಿಂದ ಪ್ರಾರಂಭವಾಯಿತು, ಯಾಕೆಂದರೆ ಭಾಗಶಃ ಅವನೇ ಮೊದಲು ದಾವೀದನೊಂದಿಗೆ ಸಂಬಂಧ ಬೆಳೆಸಲು ಇಷ್ಟಪಟ್ಟನು. ಮತ್ತು ಭಾಗಶಃ ಒಬ್ಬ ಅಧೀನತೆಯಲ್ಲಿರುವವನಾಗಿ ದಾವೀದನಿಂದ ಆ ಸೂಚನೆಯು ಬಂದಿದ್ದರೆ ಅಸಮಂಜಸವೆನಿಸುತಿತ್ತು.[7] ಆ ಪದದ ಗುಣವು ಸೂಚಿಸುವಂತೆ, ಈ ಸ್ನೇಹವು ಒಂದೇ ಕಡೆಯಾಗಿದಿಲ್ಲ; ದಾವೀದನು ಯೋನಾತನನ್ನು ಪ್ರೀತಿಸಿದನು (1 ಸಮುವೇಲ 20:41; 2 ಸಮುವೇಲ 1:26; ಇತ್ಯಾದಿ).

ಆ ಒಡಂಬಡಿಕೆಯಲ್ಲಿ ಏನಿತ್ತು? ಕೆಲವರ ಪ್ರಕಾರ, ಅದು ವಿವರವಾದ ಆಚರಣೆಯನ್ನು ಒಳಗೊಂಡಿದ್ದು, ತಮ್ಮ ವಸ್ತ್ರಗಳನ್ನು ಬದಲಾಯಿಸಿಕೊಂಡು, ಔತಣ ಮತ್ತು ರಕ್ತವನ್ನು ಬೆರೆಸುವ ಪದ್ಧತಿಯಿತ್ತು. (ಬಹುಶಃ ನೀವು, ಚಿಕ್ಕ ಮಕ್ಕಳಿರುವಾಗ ಹೆಬ್ಬೆಟ್ಟುಗಳನ್ನು ಚುಚ್ಚಿಕೊಂಡು ಅದನ್ನು ಒತ್ತಿ ಹಿಡಿದು, ನಿಮ್ಮನ್ನು ಮತ್ತು ನಿಮ್ಮ ಮಿತ್ರನನ್ನೂ "ರಕ್ತ ಸಹೋದರರನ್ನಾಗಿ" ಮಾಡಿಕೊಳ್ಳುವ ಪದ್ಧತಿಯಲ್ಲಿ ಪಾಲುಗಾರರಾಗಿರಬಹುದು.) ಅದಕ್ಕಿಂತಲೂ ಹೆಚ್ಚಾಗಿ, ಅದು ಸದಾಕಾಲ ಸ್ನೇಹಿತರಾಗಿರುವೆವೆಂದು ಪ್ರತಿಜ್ಞೆಗಳನ್ನು ಬದಲಾಯಿಸಿಕೊಳ್ಳುವದಾಗಿತ್ತು (ದೇವರ ನಾಮದಲ್ಲಿ[8]) (ನೋಡಿರಿ 1 ಸಮುವೇಲ 20:16).

ಅದು ಯಾವ ರೂಪವನ್ನಾದರೂ ಪಡೆದರೂ, ಒಡಂಬಡಿಕೆಯಲ್ಲಿ ಪ್ರತಿಷ್ಠೆಯಿತ್ತು. ನಿಜವಾದ ಸ್ನೇಹವು, ಮಾತುಗಳಲ್ಲಿ ಅಥವಾ ಮಾತುಗಳಿಲ್ಲದೇ ಕಷ್ಟದಲ್ಲಿಯೂ ಸುಖದಲ್ಲಿಯೂ ಮಿತ್ರರಾಗಿರುತ್ತೇವೆ ಎಂಬ ಪ್ರತಿಷ್ಠೆಯನ್ನು ಒಳಗೊಂಡಿರುತ್ತದೆ. ನಿಜವಾದ ಸ್ನೇಹದಲ್ಲಿ, ಆ ಪ್ರತಿಷ್ಠೆಯು ಸದಾ ಪುನಶ್ಚೇತನಗೊಳ್ಳುತ್ತದೆ. ನಾವು ದಾವೀದನ ಮತ್ತು ಯೋನಾತಾನನ ಕತೆಯನ್ನು ಮುಂದುವರಿಸುವಾಗ, ಅವರಿಬ್ಬರ ಮಧ್ಯದ ಒಡಂಬಡಿಕೆಯು ಪುನಃ ನವೀಕರಿಸಲ್ಪಟ್ಟದ್ದನ್ನು ಕಾಣುತ್ತೇವೆ:

> ಆಗಲಿದರೆ ಯೆಹೋವನೇ ಶತ್ರುಗಳ ಕೈಯಿಂದ ದಾವೀದನಿಗೆ ಮುಯ್ಯಿ ತೀರಿಸಲಿ ಎಂದು ಹೇಳಿ ಅವನ ಮನೆಯವರೊಡನೆ ಒಡಂಬಡಿಕೆ ಮಾಡಿಕೊಂಡು ತಾನು ದಾವೀದನನ್ನು ಸ್ವಂತ ಪ್ರಾಣದಂತೆ ಪ್ರೀತಿಸುತ್ತಿದ್ದದರಿಂದ ಆ ಪ್ರೀತಿಸಾಕ್ಷಿಯಾಗಿ ಅವನಿಂದ ಪ್ರಮಾಣಮಾಡಿಸಿದನು (1 ಸಮುವೇಲ 20:16, 17).

> ಆಗ ಸೌಲನ ಮಗನಾದ ಯೋನಾತಾನನು ಹೋರೆಷಗೆ ಹೋಗಿ ದಾವೀದನನ್ನು ದೇವರಲ್ಲಿ ಬಲಪಡಿಸಿನು. ... ಅವರಿಬ್ಬರೂ ಯೆಹೋವನ ಸನ್ನಿಧಿಯಲ್ಲಿ ಒಡಂಬಡಿಕೆ ಮಾಡಿಕೊಂಡರು; ... (1 ಸಮುವೇಲ 23:16, 18).

ಸಾಮ್ಯುವೆಲ್ ಜಾನ್ಸನ್ ಅವರು ಹೀಗೆ ಹೇಳಿದ್ದಾರೆ, "ಒಬ್ಬ ಮನುಷ್ಯನು ತನ್ನ ಸ್ನೇಹವನ್ನು ಸದಾ ಸರಿಪಡಿಸಿ ಕೊಳ್ಳುತ್ತಿರಬೇಕು." ಮಿತ್ರತ್ವವನ್ನು ಖಚಿತವೆಂದು ಭಾವಿಸಬಾರದು. ಸಮಯ ಸಮಯಕ್ಕೆ ಸ್ನೇಹವನ್ನು ಪುನಶ್ಚೇತನಗೊಳಿಸಬೇಕು. ನಾವು ಮಾತಾಡುತ್ತಿರುವದು ಇಬ್ಬರು ವ್ಯಾಪಾರದ ಸಂಗತಿಗಳಿರಬಹುದು, ಇಬ್ಬರು ಮೀನು ಹಿಡಿಯುವ ಸ್ನೇಹಿತರಿರಬಹುದು ಅಥವಾ ಪತಿ ಪತ್ನಿಯಿರಬಹುದು, ಇದು ನಿಜವಾಗಿದೆ. ಒಬ್ಬ ಪತ್ನಿಗೆ, "ಅವಳನ್ನೆ ಮತ್ತೆ ಮತ್ತೆ ಮದುವೆ ಮಾಡಿಕೊಳ್ಳುತ್ತೇನೆಂದು ಅವಳಿಗೆ ತಿಳಿಸುವಂತೆ" ಬೆಲೆಬಾಳುವ ವಜ್ರದ ಆಭರಣವನ್ನು ಕೊಳ್ಳಬೇಕೆಂದು, ಒಂದು ದೂರದರ್ಶನದ ಜಾಹೀರಾತು ಪ್ರತಿಯೊಬ್ಬ ಪತಿಗೆ ಒತ್ತಾಯಿಸಿತು. ವಜ್ರದ ಆಭರಣ ಮುಖ್ಯವಾಗಿಲ್ಲ, ಆದರೆ ನಿಮ್ಮ ಪ್ರೀತಿಯನ್ನು ಪುನಃ ದೃಢೀಕರಿಸುವದು ಮುಖ್ಯವಾಗಿದೆ.

## ಮಿತ್ರತ್ವದ ನಿಸ್ವಾರ್ಥತನ (1 ಸಮುವೇಲ 18:4)

ಯೋನಾತಾನನು ದಾವೀದನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡ ತರುವಾಯ, "ತನ್ನ ಮೈ ಮೇಲಿದ್ದ ನಿಲುವಂಗಿಯನ್ನೂ ತನ್ನ ಯುದ್ಧ ವಸ್ತ್ರಗಳನ್ನೂ ಕತ್ತಿ ಬಿಲ್ಲು ನಡುಕಟ್ಟುಗಳನ್ನೂ ದಾವೀದನಿಗೆ ಕೊಟ್ಟನು" (18:4). ಈ ಪದ್ಧತಿಯು ಹಿಂದೆಂದೂ ಆಗಿರಲಿಲ್ಲ. ಅವನ ನಿಲುವಂಗಿ ಮತ್ತು ಯುದ್ಧವಸ್ತ್ರಗಳು ಯೋನಾತಾನನ ರಾಜವಸ್ತ್ರ ಭಂಡಾರಕ್ಕೆ ಸೇರಿತ್ತು. ಆಯುಧಗಳಿಗೂ ಒಂದು ಪ್ರಾಧಾನ್ಯತೆ ಇತ್ತು. ಇಸ್ರಾಯೇಲ್ ಸೇನೆಯಲ್ಲಿ ಕೇವಲ ಕೆಲವರ ಕೈಯಲ್ಲಿ ಮಾತ್ರ ಬಿಲ್ಲು ಇತ್ತು.[9] ಬಿಲ್ಲು ಯೋನಾತಾನನ ಗುರುತಾಗಿತ್ತು (1 ಸಮುವೇಲ 20:20ff.; 2 ಸಮುವೇಲ 1:17, 18, 22). ಈ ಆಚರಣೆಯು ಸಾರ್ವಜನಿಕವಾಗಿದ್ದರೆ (ಹಾಗೆ ಇದ್ದಂತೆ ತೋರುತ್ತದೆ), ಸೌಲ ಮತ್ತು ಅಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಅದು ಅಚ್ಚರಿ ಮತ್ತು ಗಾಬರಿಯುಂಟುಮಾಡಿತು.

ದಾವೀದನಿಗೆ ಯೋನಾತಾನನು ಇವೆಲ್ಲವುಗಳನ್ನು ಯಾಕೆ ಕೊಟ್ಟನು? ಬಹುಶಃ ಅನೇಕ ಉದ್ದೇಶಗಳಿರಬಹುದು. ದಾವೀದನಿಗೆ ವಸ್ತ್ರ ಮತ್ತು ಆಯುಧದ ಅವಶ್ಯಕತೆಯಿದೆ ಎಂದು ಯೋನಾತಾನನು ಅರಿತುಕೊಂಡಿರಬಹುದು. ದಾವೀದನಿಗೆ ಅವನ ತಂದೆಯ ಮನೆಗೆ ತೆರಳಲು ಅವಕಾಶವಿರದ್ದರಿಂದ (1 ಸಮುವೇಲ 18:2), ಅವನ ಬಳಿ ಕೇವಲ ಅವನು ಧರಿಸಿದ ವಸ್ತ್ರವಿತ್ತು.[10] ಮತ್ತು ಯೋನಾತಾನ ಮತ್ತು ದಾವೀದನ ಮಧ್ಯದ ಒಡಂಬಡಿಕೆಗೆ ಮುದ್ರೆ ಹಾಕುವಂತೆ ಈ ಆಚರಣೆಯು ಒಂದು ಭಾಗವಾಗಿತ್ತು (1 ಸಮುವೇಲ 18:3).[11]

ಆದರೆ, ನಾನು ಆಲೋಚಿಸುವ ಪ್ರಕಾರ, ಈ ಬಹುಮಾನಗಳಿಗೆ ಇನ್ನೂ ಆಳವಾದ ಮಹತ್ವವಿದೆ. ಗೊಲ್ಯಾತನೊಂದಿಗಿನ ಯುದ್ಧಕ್ಕೆ ಬರೋಣ. ಸೌಲನೊಬ್ಬನೇ ಗೊಲ್ಯಾತನೊಂದಿಗೆ ಯುದ್ಧ ಮಾಡಲು ಸಮಂಜಸನಾದ ವ್ಯಕ್ತಿಯೆಂದು ನಾವು ಆಗಲೇ ಗಮನಿಸಿದ್ದೇವೆ. ಆದರೆ ಅವನು ಭಯದ ಕಾರಣ ಯುದ್ಧಮಾಡಲಿಲ್ಲ. ಇನ್ನು ಮುಂದಿನ ಯೋಗ್ಯ ವ್ಯಕ್ತಿಯಾರಾಗಿದ್ದರು? ಯುದ್ಧಗಳಲ್ಲಿ ತನ್ನನ್ನು ಸಮರ್ಥನೆಂದು ಎಣಿಸಿಕೊಂಡ ಮತ್ತು ತನ್ನ ಶೂರತನ ಮತ್ತು ಧೈರ್ಯಕ್ಕೆ ಹೆಸರುವಾಸಿಯಾದವನು ಯಾರು? ಯೋನಾತಾನ. ಯೋನಾತಾನನು ಯಾಕೆ ದೈತ್ಯನನ್ನು ಎದುರಿಸಲಿಲ್ಲ? ಅವನು ತನ್ನ ತಂದೆ ಮತ್ತು ಇತರರಂತೆ ಭಯದಿಂದ ನಿಶ್ಯೇಷನಾಗಿದ್ದನೋ? ಇದು ಯೋನಾತಾನನ ಸ್ವಭಾವಕ್ಕೆ ಸರಿ ಹೊಂದಲಿಲ್ಲ.[12] ಯೋನಾತಾನನು ತನ್ನ ತಂದೆಯ ವಿಷಯದಲ್ಲಿ ಗೌರವವನ್ನು ಕಳಕೊಂಡಿದ್ದನು; ತನ್ನ ತಂದೆಯ ಬದಲಾಗಿ ಸಿಂಹಾಸನಕ್ಕೆ ಬರುವ ನಿರೀಕ್ಷೆಯಿರಲಿಲ್ಲ; ಇಸ್ರಾಯೇಲ್ ರಾಷ್ಟ್ರದ ಭವಿಷ್ಯದ ಕುರಿತು ಅವನು ನಿರೀಕ್ಷೆಯನ್ನು ಕಳಕೊಂಡಿದ್ದನು; ಅವನು ಭಯದಿಂದ ನಿಶ್ಯೇಷನಾಗಿರದೇ ಹತಾಶನಾಗಿದ್ದನು, ಎಂದು ಸೂಚಿಸಲಾಗಿದೆ. ದಾವೀದನು ಫಿಲಿಷ್ಟಿಯನನ್ನು ಎದುರಿಸಲು ತಗ್ಗಿನಲ್ಲಿ ಕಾಲಿಟ್ಟಾಗ, ಯೋನಾತಾನನ ಹೃದಯದಲ್ಲಿ ನಿರೀಕ್ಷೆಯು ಹುಟ್ಟಿತು. ದಾವೀದನನ್ನು ಚೆನ್ನಾಗಿ ಪರಿಚಯಿಸಿಕೊಂಡತೆ, ನಿರೀಕ್ಷೆಯು ಖಚಿತವಾಯಿತು. ಇಲ್ಲಿರುವ

ಇವನು ಸಿಂಹಾಸನಕ್ಕೆ ಯೋಗ್ಯನು ಮತ್ತು ಇಸ್ರಾಯೇಲಿಗೆ ಭವಿಷ್ಯವನ್ನು ಕೊಡಬಲ್ಲನು!

ಈ ವಿಶ್ಲೇಷಣೆಯು ಸರಿಯಾಗಿದ್ದರೆ, ಯೋನಾತಾನನ ಬಹುಮಾನಗಳಿಗೆ ಒಂದು ಸಾಂಕೇತಿಕವಾದ ಮಹತ್ವವಿತ್ತು. ಯೋನಾತಾನನು ದಾವೀದನಿಗೆ ಹೀಗೆ ಹೇಳಿದಂತಾಯಿತು, "ನಾನು ಸಿಂಹಾಸನಕ್ಕೆ ಇರುವ ನನ್ನ ಹಕ್ಕನ್ನು ಬಿಟ್ಟುಕೊಡುತ್ತೇನೆ ಮತ್ತು ನಿನಗೆ ನಾನು ಬೆಂಬಲ ಸೂಚಿಸುತ್ತೇನೆ!" ಈ ಆಚರಣೆಯು ತರ್ಜುಮೆಯು, ಯೋನಾತಾನ ಮತ್ತು ದಾವೀದರ ನಡುವಿನ ನಂತರದ ಘಟನೆಗಳಿಗೆ ಖಂಡಿತವಾಗಿಯೂ ಸಮಂಜಸವೆನ್ನಿಸುತ್ತದೆ (1 ಸಮುವೇಲ 23:17; ಇತ್ಯಾದಿ). ಯೋನಾತಾನನಿಗೆ ಯಾವ ಬೆಲೆ ಕೊಡಬೇಕಾಯಿತು ಎಂದು ನಾವು ಅರ್ಥ ಮಾಡಿಕೊಳ್ಳುವದು ಕಷ್ಟವಾಗುತ್ತದೆ. ಇಲ್ಲಿ ಪ್ರಕಟವಾದ ನಿಸ್ವಾರ್ಥತನವು, ಧರ್ಮಶಾಸ್ತ್ರದಲ್ಲಿ ಅಥವಾ ಜೀವನದಲ್ಲಿ ಎಲ್ಲಿಯೂ ಮತ್ತೆ ತೋರಿಬರುವದಿಲ್ಲ.

ನಿಸ್ವಾರ್ಥತನವು ಮಿತ್ರತ್ವದ ಒಂದು ಸಹಜ ಭಾಗವಾಗಿದೆ. ಬಿಟ್ಟು ಕೊಡುವದು ಇಲ್ಲದೇ ನಿಜವಾದ ಮಿತ್ರತ್ವವು ಇಲ್ಲ. ಯೋನಾತಾನನು ನಂತರ ದಾವೀದನಿಗೆ, "ನಾನು ನಿನಗೋಸ್ಕರ *ಮಾಡಬೇಕಾದದ್ದನ್ನು* ಹೇಳು ಮಾಡುತ್ತೇನೆ" ಅಂದನು (1 ಸಮುವೇಲ 20:4; ಒತ್ತಿ ಹೇಳಿದ್ದು ನನ್ನದು). ನಿಜವಾದ ಸ್ನೇಹಿತರು ಹಾಗಿರುತ್ತಾರೆ - ಮತ್ತು ನಿಜವಾದ ಸ್ನೇಹಿತರು ಯಾರು ಯಾರಿಗೆ ಎಷ್ಟು ಮಾಡಿದರೆಂದು ಲೆಕ್ಕ ಇಡುವದಿಲ್ಲ. ಕರ್ತನು ಜೋ ಮತ್ತು ನನ್ನನ್ನು ಅಂಥ ನೂರಾರು ಸ್ನೇಹಿತರಿಂದ ಆಶೀರ್ವದಿಸಿದ್ದಾನೆ (ಮತ್ತು ತಗ್ಗಿಸಿದ್ದಾನೆ). ನಮ್ಮ ಮನೆಯಲ್ಲಿರುವ ವಸ್ತುಗಳಲ್ಲಿ ಸುಮಾರಿಗೆ ಎಲ್ಲವೂ ನೇರವಾಗಿಯೋ ಅಥವಾ ಬೇರೆ ರೀತಿಯಲ್ಲಿಯೋ ಮಿತ್ರರ ಕೊಡುಗೆಯಾಗಿದೆ - ಮತ್ತು ಅದೆಲ್ಲದರ ಹಿಂದೆ ಒಂದು ಕತೆಯಿದೆ. ನಮ್ಮ ಮನೆಯಲ್ಲಿರುವ ವಸ್ತುಗಳನ್ನು ನೋಡು ವಾಗ, ಚಿತ್ರಗಳು ಮತ್ತು ಇತರ ಸುಂದರ ವಸ್ತುಗಳಿರಬಹುದು, ಪೀಠೋಪಕರಣಗಳನ್ನು ಮುಟ್ಟಿ ನೋಡಿ, ನಮ್ಮ ಸುಂದರವಾದ ಸ್ನೇಹವನ್ನು ನೆನಪು ಮಾಡಿಕೊಳ್ಳುತ್ತೇವೆ.

## ಮಿತ್ರತ್ವದ ಪರೀಕ್ಷೆ (1 ಸಮುವೇಲ 18:5-19:7)

ಒಂದಿಲ್ಲ ಒಮ್ಮೆ, ಪ್ರತಿಯೊಂದು ಸ್ನೇಹವು ಪರೀಕ್ಷಿಸಲ್ಪಡುವದು. ಹೆಚ್ಚು ಆತ್ಮಿಯವಾಗಿರುವ ಸ್ನೇಹವು ಜೀವನದ ತೂಫಾನುಗಳನ್ನು ಎದುರಿಸುರುತ್ತವೆ. ಯೋನಾತಾನ ಮತ್ತು ದಾವೀದರ ಸ್ನೇಹವು ಬಹು ಬೇನೆ ಪರೀಕ್ಷೆಗೊಳಗಾಯಿತು.

ದಾವೀದನು ಸೌಲನ ಮನೆಯೊಳಗೆ ಸ್ವೀಕರಿಸಲ್ಪಟ್ಟಾಗ, ಅವನು ಆಸ್ಥಾನದಲ್ಲಿ ಎಲ್ಲರಿಗೂ ಪ್ರಿಯನಾಗಿದ್ದನು. ಸ್ವಲ್ಪವೇ ದಿನಗಳಲ್ಲಿ, ಹುಲ್ಲುಗಾವಲುಗಳಲ್ಲಿ ಯಾರಿಗೂ ಪರಿಚಯವಿರದ ದಾವೀದನು ಆ ಪ್ರದೇಶದಲ್ಲಿ ಹೆಸರುವಾಸಿಯಾದ ಮನುಷ್ಯನಾದನು (1 ಸಮುವೇಲ 18:5, 16, 30). ಆದಾಗ್ಯೂ, ಅರಸನೊಡನೆಯ ಅವನ ಪ್ರಖ್ಯಾತಿಯು, ಬಹು ಕ್ಷಣಿಕವಾಗಿತ್ತು. ಒಂದು ದಿನ ಸೌಲನು ಮತ್ತು ಅವನ ಸೇನೆಯು ಯುದ್ಧದಲ್ಲಿ ಜಯಪಡೆದು ಹಿಂತಿರುಗಿ ಬರುತ್ತಿರುವಾಗ, ಅಲ್ಲಿನ ಸ್ತ್ರೀಯರು, "ಸೌಲನು ಸಾವಿರಗಟ್ಟಳೆಯಾಗಿ ಕೊಂದನು; ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು" ಎಂದು ಹಾಡಿದರು (18:7). ತಕ್ಷಣವೇ ಸೌಲನ ಹೃದಯದಲ್ಲಿದ್ದ ಪ್ರೀತಿಯು ಒಣಗಿ ಹೋಯಿತು, ಅದರ ಬದಲಾಗಿ ಅಸೂಯೆಯ ರೋಗ ತಟ್ಟಿತು (1 ಸಮುವೇಲ 16:21).

ಸೌಲನ ಅಸೂಯೆಯು, ಕೊಲ್ಲುವ ಆವೇಶಕ್ಕೆ ತಿರುಗಿತು. ದಾವೀದನನ್ನು ಕೊಲ್ಲಲು ಅವನು ಅನೇಕ ಒಳಸಂಚುಗಳನ್ನು ಸೃಷ್ಟಿಸಿದನು, ಆದರೆ ಅವನ ಒಳಸಂಚು ಗಳು ಹಿಂದಕ್ಕೆ ಬಂದವು. ದಾವೀದನನ್ನು ನಾಶ ಮಾಡುವ ಬದಲು, ಪ್ರತಿಯೊಂದು ತಂತ್ರವು, ದಾವೀದನನ್ನು ಇನ್ನೂ ಹೆಚ್ಚು ಹೆಸರುವಾಸಿಯಾಗುವಂತೆಯೂ ಮತ್ತು ಹೆಚ್ಚು ಗೌರವಿಸಲ್ಪಡುವಂತೆಯೂ ಮಾಡಿದವು (1 ಸಮುವೇಲ 18:30). ಕೊನೆಗೆ ಸೌಲನು, ತಂತ್ರಗಳನ್ನು ರಚಿಸುವ ಸಮಯ ತೀರಿತು ಎಂದು ನಿರ್ಧರಿಸಿದನು. ತನ್ನ ಮಗ ಯೋನಾತಾನನ್ನು ಒಳಗೊಂಡು

ಮುಖ್ಯ ಜನರನ್ನು ಸುತ್ತಲೂ ಕರೆದು, "ದಾವೀದನನ್ನು ಕೊಲ್ಲಲು" ಆಜ್ಞೆ ಕೊಟ್ಟನು (19:1). ಪ್ರತಿಯೊಬ್ಬರ ಮುಖದ ಮೇಲಿನ ಆಶ್ಚರ್ಯ ಮತ್ತು ದಿಗ್ಭ್ರಾಂತಿಯನ್ನು ನೀವು ನೆನಸಬಹುದೋ? ದಾವೀದನು ಒಬ್ಬ ರಾಷ್ಟ್ರೀಯ ನಾಯಕನಾಗಿದ್ದನು!

ಒಂದು ಕ್ಷಣ, ನೀವು ಯೊನಾತಾನನ ಸ್ಥಾನದಲ್ಲಿ ನಿಮ್ಮನ್ನು ಇಟ್ಟು ಕೊಳ್ಳಿರಿ - ನಿಮ್ಮ ತಂದೆಯ ಕಡೆಗಿನ ನಿಷ್ಠೆ ಮತ್ತು ನಿಮ್ಮ ಸ್ನೇಹಿತನ ಕಡೆಗಿನ ಪ್ರೀತಿಯ ಮಧ್ಯ ನೀವು ಸಿಲುಕಿಕೊಳ್ಳುತ್ತೀರಿ. ಅನೇಕ ಪರೀಕ್ಷೆಯಾಗಿತ್ತು. ಇದು ದಾವೀದನೊಂದಿಗಿನ ಯೋನಾತಾನನ ಸ್ನೇಹದ ಮೊದಲ ಪರೀಕ್ಷೆಯಾಗಿತ್ತು.

ಯೋನಾತಾನನು ದಾವೀದನನ್ನು ಎಚ್ಚರಿಸಿದನು ಮತ್ತು ಅಡಗಿ ಕೊಳ್ಳುವದಕ್ಕೆ ಸೂಚಿಸಿದನು (19:2, 3). ಯೋನಾತಾನನು ತನ್ನ ಸ್ನೇಹಿತನ ವಿಷಯದಲ್ಲಿ ತನ್ನ ತಂದೆಯೊಂದಿಗೆ ಪ್ರತಿವಾದಿಸಲು ನಿರ್ಧರಿಸಿದನು. ಹಾಗೆ ಮಾಡುವಾಗ ಯೋನಾತಾನನು ತನ್ನ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ವ್ಯವಹರಿಸಬೇಕಾಯಿತು ಯಾಕೆಂದರೆ, ಅರಸನ ಮಗನೂ ಅರಸನ ಕೋಪಕ್ಕೆ ಹೊರತಾಗಿಲ್ಲ (ಹೋಲಿಸು 1 ಸಮುವೇಲ 14:44). ಒಬ್ಬ ನಿಜ ಸ್ನೇಹಿತನು ತನ್ನ ಮಿತ್ರನ ಪರವಹಿಸಿ, ವೈಯಕ್ತಿಕವಾಗಿ ತನಗೆ ಎಷ್ಟೇ ಹಾನಿಯಾದರೂ ಅವನ ಹೆಸರು ಅಪಮಾನಕ್ಕೆ ಒಳಗಾಗದಂತೆ ನೋಡಿಕೊಳ್ಳುತ್ತಾನೆ.

ಮರುದಿನ ಬೆಳಿಗ್ಗೆ ಸೌಲ ಮತ್ತು ಯೋನಾತಾನರು ನಡೆಯುತ್ತಾ ಹೋಗುವಾಗ, ಯೋನಾತಾನನು ತನ್ನ ಭಾವಾವೇಶದ ಬೇಡಿಕೆಯನ್ನು ಇಟ್ಟನು:

> ಒಡೆಯನು ತನ್ನ ಸೇವಕನಾದ ದಾವೀದನಿಗೆ ಅನ್ಯಾಯ ಮಾಡದಿರಲಿ; ಅವನು ನಿನಗೆ ದ್ರೋಹ ಮಾಡಲಿಲ್ಲ; ಅವನು ಮಾಡಿದ್ದೆಲ್ಲವೂ ನಿನ್ನ ಹಿತಕ್ಕಾಗಿಯೇ.[13] ತನ್ನ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಹೋಗಿ ಆ ಫಿಲಿಷ್ಟಿಯನನ್ನು ಕೊಂದನು; ಯೆಹೋವನು ಇಸ್ರಾಯೇಲ್ಯರಿಗೆ ಮಹಾ ಜಯವನ್ನುಂಟು ಮಾಡಿದನು. ನೀನು ಅದನ್ನು ನೋಡಿ ಸಂತೋಷಪಟ್ಟೆಯಲ್ಲಾ; ದಾವೀದನನ್ನು ನಿಷ್ಕಾರಣವಾಗಿ ಕೊಂದು ನಿರ್ದೋಷಿಯ ರಕ್ತವನ್ನು ಸುರಿಸಿದ ಅಪರಾಧಕ್ಕೆ ನೀನೇಕೆ ಗುರಿಯಾಗುತ್ತಿ? ಅಂದನು[14] (19:4, 5).

ಅದು ನೋವನ್ನುಂಟು ಮಾಡುವ ಕ್ಷಣವಾಗಿತ್ತು: ಯೋನಾತಾನನು ಕಣ್ಣೀರಿನಿಂದ ಬೇಡಿಕೊಳ್ಳುತ್ತಿದ್ದನು; ಗರ್ವದಿಂದ ತುಂಬಿದ ಅರಸನು ತಾತ್ಕಲಿಕವಾಗಿ ತರ್ಕ ಮಾಡಿದನು: "ಸೌಲನು ಯೋನಾತಾನನ ಮಾತುಗಳನ್ನು ಲಾಲಿಸಿ - ಯೆಹೋವನಾಣೆ, ಅವನನ್ನು ಕೊಲ್ಲುವದಿಲ್ಲ ಎಂದು ಪ್ರಮಾಣ ಮಾಡಿದನು" (19:6). ಯೋನಾತಾನನು ಆನಂದದಿಂದ ದಾವೀದನನ್ನು ಅರಮನೆಗೆ ಕರೆ ತಂದನು (19:7).

ನಮ್ಮಲ್ಲಿ ಒಂದು ನಾಣ್ಣುಡಿಯಿದೆ: "ಕಷ್ಟದ ಸಮಯದಲ್ಲಿರುವ ಮಿತ್ರನು, ನಿಜವಾದ ಮಿತ್ರನೇ ಸರಿ." ನಾನು ಚಿಕ್ಕವನಿರುವಾಗ ಈ ನಾಣ್ಣುಡಿ ನನ್ನನ್ನು ಆಶ್ಚರ್ಯಚಕಿತನನ್ನಾಗಿಸಿತು. "ಕಷ್ಟದ ಸಮಯದಲ್ಲಿರುವ" ಎಂಬ ಪದಕ್ಕೆ "ಕಷ್ಟದಲ್ಲಿರುವ ಮಿತ್ರ" ಎಂಬ ಅರ್ಥವಿದೆ ಎಂದು ನಾನಂದುಕೊಂಡಿದ್ದೆನು. ಕಷ್ಟದಲ್ಲಿರುವ ಮಿತ್ರ ಹೇಗೆ "ನಿಜವಾದ ಮಿತ್ರನಾಗುತ್ತಾನೆ" ಎಂದು ನನಗೆ ಅರ್ಥವಾಗಲಿಲ್ಲ. ಕೊನೆಗೆ ಅದು ನನಗೆ ಅರ್ಥವಾಯಿತು, "ಕಷ್ಟದಲ್ಲಿರುವ ಮಿತ್ರ" ಅಂದರೆ ಮಿತ್ರನ ಕಷ್ಟವಲ್ಲ ಬದಲಾಗಿ *ನನ್ನ* ಕಷ್ಟದಲ್ಲಿ ಎಂದು ಎಲ್ಲಾ ಸಂಗತಿಗಳು ನನಗೆ ಕೆಟ್ಟದಾಗಿ ಆಗುತ್ತಿದ್ದರೂ, ಅವನಿಗೆ ಕೊಡಲು ನನ್ನಲ್ಲಿ ಏನೂ ಇರದಿದ್ದರೂ, ಮಿತ್ರನೂ ನನ್ನ ಜೊತೆ ಇದ್ದರೇ, ಅವನೇ "ನಿಜವಾದ ಮಿತ್ರನು" ಇಂಥ ಸ್ನೇಹಿತನು ನಮಗೆಲ್ಲ ಬೇಕು, ಇಂಥ ಸ್ನೇಹಿತರು ನಾವಾಗಬೇಕು ಮತ್ತು ಯೋನಾತಾನನಂಥ ಸ್ನೇಹಿತ. ತನಗೋಸ್ಕರ ನಿಲ್ಲಲು ಒಬ್ಬರು ದಾವೀದನಿಗೆ ಬೇಕಾಗಿತ್ತು - ಯೋನಾತಾನನು ನಿಂತನು.

## ಮಿತ್ರತ್ವದ ಮುಕ್ತತನ (1 ಸಮುವೇಲ 19:8-20:42)

ದಾವೀದನು ಅರಮನೆಗೆ ಹಿಂತಿರುಗಿದ ಸ್ವಲ್ಪ ಸಮಯದಲ್ಲಿಯೇ ಸೌಲನು ದಾವೀದನನ್ನು ಕೊಲ್ಲದೇ ಇರುವ ತನ್ನ ಪ್ರತಿಜ್ಞೆಯನ್ನು ಮುರಿದನು,[15] ಮತ್ತು ದಾವೀದನನ್ನು ಕೊಲ್ಲಲು ಈಟಿಯನ್ನು ಎಸೆದನು (ಮೊದಲು ಎರಡು ಬಾರಿ ಮಾಡಿದಂತೆ). ಗೋಡೆಯಲ್ಲಿ ಸಿಕ್ಕಿಕೊಂಡು ಅಲುಗಾಡುತ್ತಿರುವ ಈಟಿಯನ್ನು ದಾವೀದನು ನೋಡಿದಾಗ, ಅವನಿಗೆ ಏನು ಮಾಡಬೇಕೆಂದು ತಿಳಿಯಿತು (ವ್ಯಂಗ್ಯವಾಗಿ) ಅವನು ರಾತ್ರಿಯಲ್ಲಿ ಓಡಿಹೋದನು.

ಅವನು ಮೊದಲು ತನ್ನ ಮನೆಗೆ ಹೋದನು,[16] ನಂತರ ಅನೇಕ ವರ್ಷಗಳ ಹಿಂದೆ ತನ್ನನ್ನು ಅರಸನನ್ನಾಗಿ ಅಭಿಷೇಕಿಸಿದ ಸಮುವೇಲನ ಕಡೆಗೆ ಯಾರೂ ಮುದುಕನಾದ ಪ್ರವಾದಿಯ ಕಡೆಗೆ ಬೊಟ್ಟು ಮಾಡಿ ತೋರಿಸಲು ಸಾಧ್ಯವಿರಲಿಲ್ಲ. ಹೇಗೂ ಸೌಲನು ಮೂರು ಗುಂಪು ಹಂತಕರನ್ನು ಅವನ ಹಿಂದೆ ಕಳುಹಿಸಿದನು ಕೊನೆಗೆ ತಾನೇ ಸ್ವತಃ ಬಂದನು. ದೂತರು ಮತ್ತು ಸೌಲನ ಮೇಲೆ ದೇವರು ತನ್ನ ಆತ್ಮವನ್ನು ಕಳುಹಿಸುವದರ ಮೂಲಕ ದೇವರು ಮಧ್ಯಸ್ಥಿಕೆ ವಹಿಸಿದನು. ದಾವೀದನು ಮತ್ತೇ ಓಡಿಹೋದನು, ಸೌಲನು ಅಸಂಬದ್ಧ ಮಾತುಗಳನ್ನು ಉಚ್ಚರಿಸುತ್ತಾ ನೆಲದ ಮೇಲೆ ಬಿದ್ದು ಕೊಂಡಿದ್ದನು.[17]

ಸೌಲನು ತಾತ್ಕಾಲಿಕವಾಗಿ ಅಸಮರ್ಥನಾಗಿರುವಾಗ, ದಾವೀದನು ಗಿಬೆಯಕ್ಕೆ ತನ್ನ ಸ್ನೇಹತ ಯೋನಾತಾನನನ್ನು ನೋಡುವದಕ್ಕೆ ಬಂದನು. ಬಹುಶಃ ಯೋನಾತಾನನು ತನ್ನ ಮತ್ತು ಸೌಲನ ನಡುವೆ ಮಧ್ಯವರ್ತಿಯಾಗಿ ಕೆಲಸ ಮಾಡಬಹುದಾಗಿತ್ತು. ದಾವೀದನು ತನ್ನ ಹೃದಯವನ್ನು ಯೋನಾತಾನನ ಮುಂದೆ ಬಿಚ್ಚಿದನು. "ನಿನ್ನ ತಂದೆಯು ನನ್ನ ಪ್ರಾಣವನ್ನು ತೆಗೆಯಬೇಕೆಂದಿರುತ್ತಾನಲ್ಲಾ; ನಾನೇನು ಮಾಡಿದೆನು? ನನ್ನ ಅಪರಾಧವೇನು?" ಎಂದು ದಾವೀದನು ಅತ್ತನು (1 ಸಮುವೇಲ 20:1).

ಸೌಲನು ಮತ್ತೆ ದಾವೀದನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದನೆಂದು ಯೋನಾತಾನನು ನಂಬಲಾಗಲಿಲ್ಲ (20:2). "ಯೆಹೋವನಾಣೆ, ಅವನನ್ನು ಕೊಲ್ಲುವದಿಲ್ಲ" ಅವನ ತಂದೆಯು ಗಂಭೀರವಾಗಿ ವಾಗ್ದಾನ ಮಾಡಿದನು (19:6).

ದಾವೀದನು ಅದು ಸತ್ಯವೆಂದು ನಿಖರವಾಗಿ ಹೇಳಿದನು: "ನಿನ್ನ ಜೀವದಾಣೆ, ಯೆಹೋವನಾಣೆ, ನನಗೂ ಮರಣಕ್ಕೂ ಒಂದು ಗೇಣು ಮಾತ್ರ ಅಂತರವಿದೆ" (20:3).

ದಾವೀದನ ಮನಸ್ಸಿನಲ್ಲಿ ಒಂದು ಯೋಜನೆಯಿತ್ತು. ಆ ಯೋಜನೆಯ ಮೂಲ ಉದ್ದೇಶವು, ತನ್ನಲ್ಲಿ ಹಿಂಸೆಯ ಮನೋಸ್ಥಿತಿ ಇದೆಯೆಂದು ಯೋನಾತಾನನಿಗೆ ಮನವರಿಕೆ ಮಾಡುವದಾಗಿತ್ತು. ಯೋನಾತಾನನೊಂದಿಗಿನ ಅವನ ಸಂಬಂಧವು ಅವನ ಮನಸ್ಸಿನಲ್ಲಿ ಪ್ರಾಮುಖ್ಯವಾಗಿತ್ತು (20:8).[18] ಅವನು ತನ್ನ ಮಿತ್ರನಿಗೆ, "ನಾಳೆ ಶುದ್ಧ ಪಾಡ್ಯವು; ನಾನು ಅರಸನ ಪಂಕ್ತಿಯಲ್ಲಿ ಕೂತು ಊಟಮಾಡಬೇಕಾಗಿರುವದು" ಎಂದನು (20:5). ಧರ್ಮಶಾಸ್ತ್ರದ ಪ್ರಕಾರ, ತಿಂಗಳಿಗೊಂದು ಬಾರಿ ವಿಶೇಷವಾದ ವಿಶ್ರಾಂತಿಯ ದಿನವನ್ನು ನೇಮಿಸಲಾಗಿತ್ತು (ಅರಣ್ಯಕಾಂಡ 28:11-25). ಸೌಲನು ಈ ಅವಕಾಶವನ್ನು, ತನ್ನ ಸರಕಾರದಲ್ಲಿನ ಪ್ರಮುಖ ವ್ಯಕ್ತಿಗಳನ್ನು, ಯೋನಾತಾನ, ಅಬ್ನೇರ ಮತ್ತು ದಾವೀದರನ್ನು "ಮಂತ್ರಿ ಮಂಡಲದ ಸಭೆಯನ್ನು" ಸೇರಿಸುವದಕ್ಕೆ ಉಪಯೋಗಿ ಸುತ್ತಿದ್ದನು (1 ಸಮುವೇಲ 20:25). ದಾವೀದನು ಮುಂದುವರಿಸಿದನು:

> ನಿನ್ನ ತಂದೆಯು ನನ್ನನ್ನು ಕುರಿತು ವಿಚಾರಮಾಡಿದರೆ ನೀನು - "ದಾವೀದನು ತನ್ನ ಊರಾದ ಬೇತ್ಲೆಹೇಮಿಗೆ ಹೋಗಿ ಬರುವದಕ್ಕೆ ಅಪ್ಪಣೆಯಾಗಬೇಕೆಂದು ನನನ್ನು ಬಹಳವಾಗಿ ಬೇಡಿಕೊಂಡನು; ಅವನ ಗೋತ್ರದವರು ಅಲ್ಲಿ ವಾರ್ಷಿಕ ಯಜ್ಞ ಮಾಡುತ್ತಾರಂತೆ"[19] ಎಂದು ಹೇಳು. ಅವನು ಆಗಲಿ ಎಂದರೆ ನಿನ್ನ ಸೇವಕನಾದ ನಾನು ಸುರಕ್ಷಿತನಾಗಿರು ವೆನು; ಸಿಟ್ಟು ಮಾಡಿದರೆ[20] ಅವನಿಂದ ನನಗೆ ಕೇಡು ಸಿದ್ಧ ವಾಗಿದೆಂದು ತಿಳಿದು ಕೋ (20:6, 7).

ಯೋನಾತಾನನು ಬಹಳವಾಗಿ ದುಃಖಗೊಂಡನು ಮತ್ತು ಈ ಪ್ರತಿಜ್ಞೆಯನ್ನು ದಾವೀದನಿಗೆ ಮಾಡಿದನು:

> ... ಇಸ್ರಾಯೇಲ್ ದೇವರಾದ ಯೆಹೋವನೇ ಸಾಕ್ಷಿ; ನಾನು ನಾಳೆ ಇಲ್ಲವೆ ನಾಡದು ನಿನ್ನ ವಿಷಯದಲ್ಲಿ ನನ್ನ ತಂದೆಯೊಡನೆ ಮಾತಾಡಿ ನಿನ್ನ ಮೇಲೆ ಅವನಿಗೆ ದಯವುಂಟೆಂದು ಗೊತ್ತಾದರೆ ಕೂಡಲೆ ಅದನ್ನು ನಿನಗೆ ತಿಳಿಯಪಡಿಸುವೆನು. ನನ್ನ ತಂದೆಯು ನಿನಗೆ ಕೇಡುಮಾಡ ಮನಸ್ಸುಳ್ಳವನಾಗಿದ್ದಾನೆಂದು ಗೊತ್ತಾದರೆ ಅದನ್ನೂ ನಿನಗೆ ತಿಳಿಸಿ ನೀನು ತಪ್ಪಿಸಿಕೊಂಡು ಸುರಕ್ಷಿತನಾಗುವ ಹಾಗೆ ನಿನ್ನನ್ನು ಕಳುಹಿಸಿ ಬಿಡುವೆನು. ಯೆಹೋವನು ನಿನ್ನ ಸಂಗಡವಿರಲಿ ... (20:12, 13).[21]

ಸೌಲನು ರಾಜ್ಯದ ಸರ್ವ ಸಂಪತ್ತನ್ನು ದಾವೀದನನ್ನು ಕೊಲ್ಲಲು ಉಪಯೋಗಿಸಿದರೂ, ಕೇವಲ ಯೆಹೋವನೇ ಅವನನ್ನು ರಕ್ಷಿಸಬೇಕು.

ಬದಲಾಗಿ ಯೋನಾತಾನನು ತನ್ನ ಹೃದಯವನ್ನು ದಾವೀದನಿಗೆ ತೆರೆದನು ಮತ್ತು ಅಲ್ಲಿ ಅಡಕವಾಗಿರುವ ನಂಬಿಕೆ ಮತ್ತು ಭಯ ಎರಡನ್ನೂ ಪ್ರಕಟಿಸಿದನು. ದೇವರು ದಾವೀದನೊಂದಿಗೆ ಇರುವನು ಮತ್ತು ದಾವೀದನು ಮುಂದಿನ ಅರಸನಾಗುತ್ತಾನೆಂಬ ಭರವಸೆಯಿಂದ ಯೋನಾತಾನನು ಕೇಳಿದನು:

> ನೀನು ಯೆಹೋವನನ್ನು ನೆನೆಸಿ ನನ್ನ ಜೀವಮಾನದಲ್ಲೆಲ್ಲಾ[22] ನನಗೆ ಕೃಪೆ ತೋರಿಸು; ನಾನು ಸತ್ತನಂತರ ನನ್ನ ಮನೆಯ ಮೇಲೆಯೂ ಶಾಶ್ವತವಾಗಿ ನಿನ್ನ ದಯವಿರಲಿ.[23] ಯೆಹೋವನು ನಿನ್ನ ಎಲ್ಲಾ ಶತ್ರುಗಳನ್ನು ಭೂಮಿಯಿಂದ ತೆಗೆದು ಹಾಕಿದ ಮೇಲಾದರೂ ಅದು ನನ್ನ ಮನೆಯಿಂದ ಅಗಲದಿರಲಿ (20:14, 15).

ದಾಖಲೆಗಳ ಪ್ರಕಾರ ಯೋನಾತಾನನು ದಾವೀದನಿಗೆ ಮಾಡಿದ ಒಂದೇ ಒಂದು ಬೇಡಿಕೆ ಇದಾಗಿದೆ. ದಾವೀದನು ಒಪ್ಪಿದನು[24] ಮತ್ತು ಇಬ್ಬರೂ ಸ್ನೇಹಿತರು ತಮ್ಮ ಪ್ರತಿಜ್ಞೆಯನ್ನು ಪುನಃ ನವೀಕರಿಸಿರು (20:16, 17).

ದಾವೀದನಿಗೆ ಒಂದು ವಿಷಯ ಮಾತ್ರ ಮಾಡುವದಕ್ಕುಳಿಯಿತು. ಅರಸನ ಗುಪ್ತಚಾರರು ಎಲ್ಲಾ ಕಡೆಯಿರುವಾಗ, ಯೋನಾತಾನನು ಹೇಗೆ ಸೌಲನ ಉದ್ದೇಶಗಳ ಸುದ್ಧಿಯನ್ನು ಮುಟ್ಟಿಸಬೇಕು? ಯೋನಾತಾನನು ಒಂದು ಸೂಚನೆಯನ್ನು ಕೊಟ್ಟನು: ಮೂರು ದಿನಗಳ ತರುವಾಯ ದಾವೀದನು ಚಿರ ಪರಿಚಿತವಾಗಿರುವ ಬಯಲಿನಲ್ಲಿ ಅಡಗಿಕೊಳ್ಳಬೇಕು. ಯೋನಾತಾನನು ಗುರಿಯಿಟ್ಟು ಹೊಡೆಯುವದನ್ನು ಅಭ್ಯಾಸ ಮಾಡುವದಕ್ಕೆ ಆ ಸ್ಥಳಕ್ಕೆ ಬರುವನು. ಅವನು ತನ್ನ ಬಾಣಗಳನ್ನು ಎಸೆಯುವ ರೀತಿ ಮತ್ತು ತನ್ನ ಸೇವಕನಿಗೆ ಕೊಟ್ಟ ಅಪ್ಪಣೆಗಳು, ಸುದ್ದಿಯು ಒಳ್ಳೇಯದೋ ಅಥವಾ ಕೆಟ್ಟದ್ದೋ ಎಂದು ಸೂಚಿಸುತ್ತವೆ.

ಅವನು ಮತ್ತು ದಾವೀದನು ಬೇರೆಯಾಗಿ ಹೋಗುವ ಮೊದಲು, ಯೋನಾತಾನನು, "ನಮ್ಮಿಬ್ಬರ ಒಡಂಬಡಿಕೆಗೆ ಯೆಹೋವನೇ ನಿತ್ಯ ಸಾಕ್ಷಿಯಾಗಿರುವೆನು ಅಂದನು" (20:23).

ಮರುದಿನ ಸೌಲ, ಯೋನಾತಾನ ಮತ್ತು ಅಬ್ನೇರ ಅರಸನ ಊಟದ ಪಂಕ್ತಿಯಲ್ಲಿ ಕೂತುಕೊಂಡರು, "ಆದರೆ ದಾವೀದನ ಸ್ಥಳವು ಬರಿದಾಗಿತ್ತು" (20:25). ಮೊದಲನೇಯ ದಿನ, ದಾವೀದನು ಹೊಲೆಯಾಗಿರಬಹುದೆಂದು ನೆನೆಸಿದನು[25] (ಶುದ್ಧಾಚಾರದ ಪದ್ಧತಿಯ ಪ್ರಕಾರ ಶುದ್ಧರಾಗಲು ಒಂದು ದಿನ ಬೇಕಿತ್ತು [ಯಾಜಕಕಾಂಡ 15:16-23; ಧರ್ಮೋಪದೇಶ ಕಾಂಡ 23:10, 11]). ಆದರೆ ದಾವೀದನು ಎರಡನೇಯ ದಿನವೂ ಹಾಜರಾಗದಿದ್ದಾಗ, ಸೌಲನು ಸಂಶಯಗೊಂಡನು. ಯಾರಿಗಾದರೂ ದಾವೀದನು ಎಲ್ಲಿದ್ದಾನೆಂದು ತಿಳಿದಿದ್ದರೆ,

ಅದು ಯೋನಾತಾನನಿಗೆ ಮಾತ್ರ. ಆದುದರಿಂದ ಸೌಲನು - “ಇಷಯನ ಮಗನು ನಿನ್ನೆಯೂ ಈ ಹೊತ್ತೂ ಭೋಜನಕ್ಕೆ ಯಾಕೆ ಬರಲಿಲ್ಲ?” ಎಂದು ಯೋನಾತಾನನಿಗೆ ಕೇಳಿದನು (20:27).

ಯೋನಾತಾನನು ಸೌಲನಿಗೆ ದಾವೀದನು ತನಗೇನು ಹೇಳಿದ್ದನೋ ಮತ್ತು ತನ್ನ ಕೆಲವು ಸ್ವಾರಸ್ಯಕರವಾದ ಮಾತುಗಳನ್ನು ಹೇಳಿದನು (20:28, 29).

ಸೌಲನು ರೋಷವುಳ್ಳವನಾದನು. “ಸೌಲನು ಯೋನಾತಾನನ ಮೇಲೆ ಬಹಳಷ್ಟು ಉರಿಗೊಂಡನು” (20:30ಎ). ಅವನು ತನ್ನ ಮಗನ ಮೇಲೆ ಕೂಗಿದನು:

> ಎಲೋ, ದುಷ್ಟ ದಾಸಿಯ ಮಗನೇ[26] ನೀನು ಇಷಯನ ಮಗನೊಡನೆ ಸ್ನೇಹ ದಿಂದಿರುವದು ನನಗೆ ಗೊತ್ತಿಲ್ಲವೋ?[27] ಇದರಿಂದ ನಿನಗೂ ನಿನ್ನನ್ನು ಹೆತ್ತವಳಿಗೂ ಮಾನಭಂಗವಾಗುವದು.[28] ಆ ಇಷಯನ ಮಗನು ಭೂಲೋಕದಲ್ಲಿರುವವರೆಗೆ ನಿನಗಾದರೂ ನಿನ್ನ ರಾಜ್ಯಕ್ಕಾದರೂ ನೆಲೆಯಿಲ್ಲ; ಆದದರಿಂದ ಅವನನ್ನು ಕರೆಸಿ ನನ್ನ ಬಳಿಗೆ ತೆಗೆದು ಕೊಂಡು ಬಾ; ಅವನು ಸಾಯಬೇಕು ಅಂದನು (20:30ಬಿ, 31).

ದಾವೀದನು ದೇಶದ್ರೋಹಕ್ಕೆ ತಪ್ಪಿತಸ್ಥನಾಗಿದ್ದನು ಮತ್ತು ಸಾಯುವದಕ್ಕೆ ಯೋಗ್ಯನಾಗಿದ್ದನು ಎಂದು ಸೌಲನ ಅಭಿಪ್ರಾಯವಾಗಿತ್ತು. ಕಣ್ಣುಗಳಲ್ಲಿ ಕೋಪ ಮತ್ತು ಹೃದಯದಲ್ಲಿ ಕೊಲೆಯನ್ನು ಇಟ್ಟು ಕೊಂಡ ಅರಸನ ಎದುರು ಎದ್ದು ನಿಲ್ಲುವದು ಜಾಣತನದ ಕೆಲಸವಾಗಿರದಿದ್ದರೂ, ಯೋನಾತಾನನು ತನ್ನ ಮಿತ್ರನಿಗೆ ಅಪಮಾನ ವಾಗುವದನ್ನು ಸಹಿಸಲಾಗಲಿಲ್ಲ. ಯೋನಾತಾನನು, “ಅವನು ಯಾಕೆ ಸಾಯಬೇಕು? ಅವನೇನು ಮಾಡಿದನು?” ಎಂದು ಕೇಳಿದನು (20:32).

ಸೌಲನು ಎಲ್ಲಾ ನಿಯಂತ್ರಣವನ್ನು ಕಳಕೊಂಡನು. ಅವನು ದಾವೀದನನ್ನು ಬರ್ಜಿಯಿಂದ ಕೊಲ್ಲಲು ಮೂರು ಬಾರಿ ಪ್ರಯತ್ನಿಸಿದನು. ಈಗ ಅವನು ತನ್ನ ಮಗನೆಡೆಗೆ ತನ್ನ ಬರ್ಜಿಯನ್ನು ಎಸೆದನು (20:33)!

ಯೋನಾತಾನ ಸ್ವಲ್ಪ ಹೊತ್ತು ನಡುಗುತ್ತಾ ಮತ್ತು ಕೋಪದಿಂದ ಸುಮ್ಮನೇ ಕೂತುಕೊಂಡನು, ನಂತರ ಎದ್ದು ಆ ಕೋಣೆಯಿಂದ ಹೊರಟುಹೋದನು (20:34). ತನ್ನ ತಂದೆಗೆ ತನ್ನನ್ನು ಕೊಲ್ಲಲು ಇನ್ನೊಂದು ಅವಕಾಶ ದೊರೆಯಬಾರದೆಂದು ಬಯಸಿದನು. ತಾನು ತನ್ನ ತಂದೆಗೆ ಏನಾದರೂ ಮಾಡಬಹುದೆಂದೂ ಭಯಪಟ್ಟನು.

ಯೋನಾತಾನನು ಹತಾಶೆಯಿಂದ ಭಾವುಕನಾದನು.[29] ಅವನ ಮನಸ್ಸಿನಿಂದ ಎಲ್ಲಾ ಸಂಶಯಗಳು ಹೊರಟುಹೋದವು. ದಾವೀದನು ಹೇಳಿದಂತೆಯೇ ಆಗಿತ್ತು; ಅವನ ತಂದೆಯು ತನ್ನ ಸ್ನೇಹಿತನನ್ನು ಕೊಲ್ಲಬೇಕೆಂದು ನಿರ್ಧರಿಸಿದ್ದನು.

ದಾವೀದನೊಂದಿಗೆ ಸಮಯ ತೆಗೆದು ಕೊಂಡದ್ದರಿಂದ ಯೋನಾತಾನನು ಮರುದಿನ ಬೆಳಿಗ್ಗೆ ಭಾರವಾದ ಹೃದಯದಿಂದ ಹೋದನು. ಎಲ್ಲವೂ ಶಜವಾಗಿದೆ ಎನ್ನುವಂತೆ, ಅವನು ಒಬ್ಬ ಸೇವಕನನ್ನು ತನ್ನ ಆಯುಧ ಹೊರಲು ಮತ್ತು ಬಾಣಗಳನ್ನು ಹಿಂದೆ ತರಲು ಕರಕೊಂಡು ಹೋದನು. ಆ ಸ್ಥಳವನ್ನು ತಲುಪಿದ ಮೇಲೆ, ಅವನು ಅನೇಕ ಬಾಣಗಳನ್ನು ಎಸೆದನು, ನಂತರ ಅದನ್ನು ತರುವಂತೆ ಆ ಹುಡುಗನನ್ನು ಕಳುಹಿಸಿದನು. ಅವನು ಆ ಹುಡುಗನಿಗೆ, “ಬಾಣವು ನಿನ್ನ ಆಚೆ ಬಿದ್ದಿತಲ್ಲಾ?” (20:37) ಎಂದು ಕೂಗಿ ಹೇಳಿದನು. ದಾವೀದನು ಸಾಯಬೇಕೆಂದು ಸೌಲನು ಮನಸ್ಸು ಮಾಡಿದ್ದಾನೆ ಮತ್ತು ದಾವೀದನಿಗೆ ಓಡಿಹೋಗುವದಕ್ಕಿಂತ ಬೇರೆ ಇನ್ಯಾವ ಆಯ್ಕೆಯಿಲ್ಲವೆಂದು ತಿಳಿಸುವಂತೆ ಇದು ಮೊದಲೇ ನೇಮಿಸಲ್ಪಟ್ಟ ಸೂಚನೆಯಾಗಿತ್ತು.

ಯೋನಾತಾನನು ತನ್ನ ಬಿಲ್ಲನ್ನು ಪುನಃ ಬಾಗಿಸಿದಾಗ, ಅವನ ಕಣ್ಣುಗಳು ಸೌಲನ ಗುಪ್ತಚಾರರು ಆ ಸ್ಥಳದಲ್ಲಿ ಇರಬಹುದೆಂದು ಹುಡುಕಿದವು.[30] ಕೊನೆಗೆ ಸುತ್ತಲೂ ಯಾರೂ ಇಲ್ಲವೆಂದು ತೃಪ್ತಿಯಾದ ಮೇಲೆ ಯೋನಾತಾನನು, ಅಭ್ಯಾಸವು ಸಾಕೆಂದು ತನ್ನ ಸೇವಕನಿಗೆ

ಹೇಳಿ ಅವನನ್ನು ಪಟ್ಟಣಕ್ಕೆ ಹಿಂದೆ ಕಳುಹಿಸಿದನು (20:40).

ಸೇವಕನು ಕಣ್ಣಿಂದ ಮರೆಯಾದ ತಕ್ಷಣ, ದಾವೀದನು ತನ್ನ ಅಡಗಿಕೊಂಡಿದ್ದ ಸ್ಥಳದಿಂದ ಎದ್ದು ಬಂದನು.[31] ಅವನ ಮೋರೆಯು ದುಃಖದಿಂದ ತುಂಬಿತ್ತು. ಯಾರೂ ಮಾತಾಡದೇ ಇದ್ದರೂ, ಯೋನಾತಾನನಿಗೂ ಮತ್ತು ಅವನಿಗೂ ಆ ಸಂದೇಶದ ಪರಿಣಾಮ ತಿಳಿದಿತ್ತು. ಅವನು ಇನ್ನು ಇರುವದು ಸಾಧ್ಯವಿರಲಿಲ್ಲ ಮತ್ತು ಯೋನಾತಾನನು ಬಿಡಲು ಸಾಧ್ಯವಿರಲಿಲ್ಲ. ಯೋನಾತಾನನ ತಂದೆಯು ತಪ್ಪಾಗಿದ್ದನು, ಆದರೆ ಅವನು ಯೋನಾತಾನನ ತಂದೆಯೇ ಸರಿ, ಮತ್ತು ಅವನ ನಿಷ್ಟೆಯು ಅವನ ಬದಿಯಲ್ಲಿರಬೇಕೆಂದು ಕರೆಯುತ್ತಿತ್ತು.

ಇಬ್ಬರೂ ಸ್ನೇಹಿತರು ಒಬ್ಬರನ್ನೊಬ್ಬರು ಎದರುಗೊಂಡದ್ದು ಹೃದಯ ವಿದ್ರಾವಕವಾಗಿತ್ತು,[32] ನಂತರ ಅವರು ಅತ್ತರು. ವಚನ 41, "ಅವರು ... ಒಬ್ಬರಿಗೊಬ್ಬರು ಮುದ್ದಿಟ್ಟುಕೊಂಡು ಅತ್ತರು; ದಾವೀದನು ಬಹಳವಾಗಿ ಅತ್ತನು."

ಒಬ್ಬರು ಹೀಗೆ ಹೇಳಿದ್ದಾರೆ, "ಒಬ್ಬ ಸ್ನೇಹಿತನ ಬಳಿ ನೀನು ನೀನಾಗಿರಬಹುದು."[33] 20ನೇ ಅಧ್ಯಾಯದಲ್ಲಿ, ನಾವು ದಾವೀದನು ಯೋನಾತಾನನ ಮುಂದೆ ತನ್ನ ಹೃದಯವನ್ನು ಹೊಯ್ದದ್ದನ್ನು ನೋಡಿದ್ದೇವೆ. ಯೋನಾತಾನನು ತನ್ನ ಭಯವನ್ನು ಯಥಾರ್ಥವಾಗಿ ಪ್ರಕಟಮಾಡಿದ್ದನ್ನು ಮತ್ತು ದಾವೀದನಿಂದ ಪ್ರತಿಜ್ಞೆಯನ್ನು ಮಾಡಿಸಿಕೊಂಡಿದ್ದನ್ನು ನೋಡಿದ್ದೇವೆ. ಈಗ ಅವರಿಬ್ಬರೂ ಆಳುವದನ್ನು - ದೊಡ್ಡ ಪುರುಷರು, ಬಲವುಳ್ಳ ಪುರುಷರು, ಅನೇಕ ಯುದ್ಧ ಗಳಲ್ಲಿ ಪಳಗಿದವರು, ಆಳುತ್ತಿದ್ದರು. ("ನಿಜವಾದ ಪುರುಷರು" ಆಳುತ್ತಾರೆ.) ನಿಜವಾದ ಸ್ನೇಹದ ಸುಂದರವಾದ ಒಂದು ಸಂಗತಿಗಳಲ್ಲಿ ಮುಕ್ತತನವು, ಒಂದಾಗಿದೆ. ನೀವು ಒಬ್ಬ ನಿಜವಾದ ಮಿತ್ರನ ಬಳಿ ಯಥಾರ್ಥವಾಗಿಯೂ ಮತ್ತು ಮುಕ್ತವಾಗಿಯೂ ಇರಬಹುದು ಮತ್ತು ಅವನು ನಿನ್ನನ್ನು ಇನ್ನೂ ಸ್ವೀಕರಿಸುವನು. ಒಬ್ಬ ನಿಜವಾದ ಸ್ನೇಹಿತನಿಗೆ ನಿನ್ನ ತಪ್ಪುಗಳ ಕುರಿತು ತಿಳಿದದೆ ಮತ್ತು ಹೇಗಿದ್ದರೂ ನಿನ್ನನ್ನು ಪ್ರೀತಿಸುತ್ತಾನೆ.

ಕೊನೆಗೂ ದಾವೀದನು ಮತ್ತು ಯೋನಾತಾನರು ಅಗಲುವ ಸಂದರ್ಭ ಬಂದಿತು.

> "ಅನಂತರ ಯೋನಾತಾನನು ದಾವೀದನಿಗೆ - ಸಮಾಧಾನದಿಂದ ಹೋಗು; ನಾವು ಯೆಹೋವನ ಹೆಸರಿನಲ್ಲಿ ಆಣೆಯಿಟ್ಟು ಒಡಂಬಡಿಕೆಯನ್ನು ಮಾಡಿಕೊಂಡಿದ್ದೇ ವಲ್ಲಾ; ಆತನೇ ನನಗೂ ನಿನಗೂ ನನ್ನ ಸಂತಾನಕ್ಕೂ ನಿನ್ನ ಸಂತಾನಕ್ಕೂ ಸದಾ ಸಂಬಂಧಸಾಕ್ಷಿಯಾಗಿರಲಿ ಎಂದು ಹೇಳಿದನು." ತರುವಾಯ ದಾವೀದನು ಹೊರಟುಹೋದನು; ಯೋನಾತಾನನು ಊರೊಳಕ್ಕೆ ಬಂದನು (20:42).

ಯೋನಾತಾನನು ಪಟ್ಟಣಕ್ಕೆ ಹಿಂತಿರುಗಿದನು, ಬಗೆಹರಿಯಲಾರದ ಸಂಬಂಧಗಳ ತೊಂದರೆಯಿಂದ ಅವನ ಹೃದಯವು ಭಾರವಾಗಿತ್ತು. ದಾವೀದನು ತನ್ನ ಜೀವದ ಭಯದಿಂದ,[34] ಅಡವಿಯಕಡೆಗೆ ತನ್ನ ಮೋರೆಯನ್ನು ಮಾಡಿಕೊಂಡು ಹೋದನು.

## ಸ್ನೇಹದ ಸ್ಥಿರತೆ (1 ಸಮುವೇಲ 21:1-23:16)

ದೇವದರ್ಶನ ಗುಡಾರವು ಇದ್ದ ನೋಬಕ್ಕೆ ದಾವೀದನು ಮೊದಲು ಓಡಿ ಹೋದನು. ನಂತರ ಅವನು ಫಿಲಿಷ್ಟಿಯ ಪಟ್ಟಣವಾದ ಗತ್ ಊರಿಗೆ ಓಡಿದನು. ಫಿಲಿಷ್ಟಿಯರು ಅವನ ಗುರುತು ಹಿಡಿದರು ಮತ್ತು ಅವನು ಯೆಹೂದ್ಯದ ಪಶ್ಚಿಮದ ದಿಕ್ಕಿನಲ್ಲಿದ್ದ ಅದುಲ್ಲಾಮ ಗವಿಗೆ ಪಾರಾದನು. ಇಲ್ಲಿ ಅವನು ಹತಾಶರಾದ ಜನರ ಗುಂಪಿಗೆ ನಾಯಕನಾದನು. ಅವನು ಎಲ್ಲಿಗೆ ಹೋದರೂ ಸೌಲನು ಅವನನ್ನು ಬಿಟ್ಟುಬಿಡದೇ ಬೆನ್ನಟ್ಟಿದನು (1 ಸಮುವೇಲ 23:14). ಕೊನೆಗೆ ದಾವೀದನು ಮತ್ತು ಅವನ ಜನರು ಬಲವಂತದಿಂದ "ಹೋರೆಷನಲ್ಲಿನ ಜೀಫ್ ಅರಣ್ಯದ ಪರ್ವತಗಳಲ್ಲಿ" ಅಡಗಿಕೊಳ್ಳಬೇಕಾಯಿತು. ಅದು ಯೆಹೂದದ ರಕ್ಷಣೆ ಕೊಡದ ಪರ್ವತ ಶ್ರೇಣಿಯಾಗಿದೆ (23:15). ಇಲ್ಲಿ ನಾವು ದಾವೀದ ಮತ್ತು ಅವನ ಮಿತ್ರನ ಕೊನೆಯ

ಭೇಟಿಯನ್ನು ನೋಡುತ್ತೇವೆ.[35]

"ಸೌಲನಾದ ಮಗನು ಯೋನಾತಾನನು ಹೋರೆಷದಲ್ಲಿ ಅಡಗಿಕೊಂಡಿದ್ದ ದಾವೀದನ ಬಳಿಗೆ ಹೋದನು" (23:16ಎ). ಇದರ ಕುರಿತು ಆಲೋಚಿಸಿರಿ ಸೌಲನು ದಾವೀದನಿಗಾಗಿ ಎಲ್ಲಾ ಕಡೆಗಳಲ್ಲಿ ಹುಡುಕುತ್ತಿದ್ದನು ಮತ್ತು ಅವನು ಸಿಕ್ಕಲಿಲ್ಲ. ಯೋನಾತಾನನು, ಒಂದು ಬೆಳಿಗ್ಗೆ ಎದ್ದು ತನಗೆ ತಾನೆ "ನಾನಿನ್ನು ತಡೆಯಲು ಸಾಧ್ಯವಿಲ್ಲ. ನಾನು *ದಾವೀದನನ್ನು* ಕಾಣಲೇ ಬೇಕು." ಎಂದು ಹೇಳಿಕೊಂಡನು. ಹೀಗೆ ಅವನು ತನ್ನ ಕೆಲವು ವಸ್ತುಗಳನ್ನು ಒಂದು ಚೀಲದಲ್ಲಿ ಹೊಂದಿಸಿಕೊಂಡು "ಹೋರೆಷನಲ್ಲಿದ್ದ ದಾವೀದನ ಬಳಿಗೆ ಹೋದನು." ಯೋನಾತಾನನಿಗೆ ತನ್ನದೇ ಆದ ಗುಪ್ತಚಾರ ಬಲವಿತ್ತು ಎಂದು ನನಗೆ ತೋರುತ್ತದೆ ಮತ್ತು ದಾವೀದನ ಜೀವನದಲ್ಲಿ ಏನೇನಾಗುತ್ತದೋ ಅದೆಲ್ಲವನ್ನೂ ಗಮನಿಸುತ್ತಿದ್ದನು. ದಾವೀದನು ಎಲ್ಲಿದ್ದನೋ ಅವನಿಗೆ ತಿಳಿದಿತ್ತು ಮತ್ತು ಅವನ ಬಳಿಗೆ ಹೋದನು.

ಸ್ನೇಹವು ಹಾಗಿರುತ್ತದೆ. ನೀವು ನಿಮ್ಮ ಸ್ನೇಹಿತರಿಂದ ಮೈಲುಗಟ್ಟಳೆ ದೂರವಾಗಿ ಬೇರ್ಪಟ್ಟಿರಬಹುದು, ಆದರೆ, ಅವನು ನಿಮ್ಮ ಯೋಚನೆ ಮತ್ತು ಪ್ರೀತಿಯಲ್ಲಿರುತ್ತಾನೆ. ನೀವು ಕಾರ್ಡ್‌ಗಳನ್ನು, ಪತ್ರಗಳನ್ನು ಅಥವಾ ಫೋನುಗಳನ್ನು ವಿನಿಮಯ ಮಾಡಿಕೊಳ್ಳುತ್ತೀರಿ. ನೀವು ಅವನೊಡನೆ ಸಂಬಂಧವಿಟ್ಟುಕೊಂಡು, ಅವನ ಜೀವನದಲ್ಲಿ ಏನಾಗುತ್ತದೆಯೋ ಅದನ್ನು ಬಲ್ಲಿರಿ. ಅವನು ಸಂತೋಷಿಸುವಾಗ ನೀವು ಸಂತೋಷಿಸುತ್ತೀರಿ; ಅವನು ಅಳುವಾಗ ನೀವು ಅಳುತ್ತೀರಿ (ರೋಮಾಪುರ 12:15). ನಂತರ ನೀವು ಬಹುಕಾಲ ಅಗಲಿರುವದು ತಾಳದಾದಾಗ, ನೀವು ಅವನನ್ನು ಭೇಟಿಯಾಗುವದಕ್ಕೆ ಮಾರ್ಗ ಹುಡುಕುತ್ತೀರಿ, ಅದು ಸ್ವಲ್ಪ ಸಮಯವಾದರೂ ಸರಿಯೇ.

ಯೋನಾತಾನನು ಈ ಪ್ರಯಾಣದಿಂದ ಎದುರಿಸಿದ ಅಪಾಯವನ್ನು ನಾವು ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ದಾವೀದನೊಡನೆ ಸ್ನೇಹ ಬೆಳೆಸುವ ಪ್ರತಿಯೊಬ್ಬನನ್ನೂ ಕೊಲ್ಲುವದಕ್ಕೆ ಹಿಂದೆ ನೋಡುವದಿಲ್ಲವೆಂದು ಸೌಲನು ನಿರೂಪಿಸಿ ತೋರಿಸಿದ್ದನು;[36] ಅವನು ತನ್ನ ಮಗನನ್ನೇ ಕೊಲ್ಲಲು ಹಿಂತೆಗೆಯುವದಿಲ್ಲವೆಂದೂ ನಿರೂಪಿಸಿದ್ದನು. ದಾವೀದನನ್ನು ನೋಡುವದಕ್ಕೆ ಹೋಗುವದರಲ್ಲಿ ಯೋನಾತಾನನು ತನ್ನ ಜೀವವನ್ನು ಅಪಾಯಕ್ಕೆ ಸಿಲುಕಿಸಿದ್ದನು. ಒಬ್ಬ ಮಿತ್ರನಾಗಿರುವದು ಅಂದರೆ ಅದೇ. ಯೇಸು ಹೇಳಿದ್ದು, "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವದೂ ಇಲ್ಲ" (ಯೋಹಾನ 15:13).

## ಸ್ನೇಹದ ಉತ್ತೇಜನವು (1 ಸಮುವೇಲ 23:16-18)

ಯೋನಾತಾನನು ದಾವೀದನ ಬಳಿಗೆ ಹೋದನು? ಅವನ ಸಾಂಗತ್ಯವನ್ನು ಆನಂದಿಸಲು ಎಂದು ನಾನು ಖಚಿತವಾಗಿ ಹೇಳುತ್ತೇನೆ - ಆದರೆ ಅದಕ್ಕಿಂತ ಇನ್ನೂ ಹೆಚ್ಚಿತ್ತು. ಮಿತ್ರರು ಮಿತ್ರರೊಂದಿಗೆ ಹಂಚಿಕೊಳ್ಳುತ್ತಾರೆ, ಸೌಲನಿಂದ ಹಿಡಿಯಲ್ಪಡುವ ಮತ್ತು ಕೊಲ್ಲಲ್ಪಡುವ ಭಯದಲ್ಲಿ ಪ್ರತಿದಿನ ದಾವೀದನು ಇರುವಾಗ ಎಷ್ಟು ನಿರಾಶೆಯಿರಬಹುದೆಂದು ಯೋನಾತಾನು ಅರಿತಿದ್ದನು. ದಾವೀದನನ್ನು *ಉತ್ತೇಜಿಸಲು* ಅವನು ಹೋದನು. "ಆಗ ಸೌಲನ ಮಗನಾದ ಯೋನಾತಾನನು ಅಲ್ಲಿಗೆ ಹೋಗಿ ದೇವರಲ್ಲಿ ಅವನನ್ನು ಬಲಪಡಿಸಿದನು" (23:16). ಮೂಲ ಭಾಷೆಯಲ್ಲಿ "ಬಲಪಡಿಸಿದನು" ಅಂದರೆ "ಅವನ ಹಸ್ತವನ್ನು ಬಲಪಡಿಸಿದನು" ಎಂದು (KJV ಯನ್ನು ನೋಡಿರಿ) ಇಬ್ರಿಯ ನುಡಿಗಟ್ಟು, "ಪೋಷಿಸು," "ಬಲಪಡಿಸು" ಮತ್ತು "ಉತ್ತೇಜಿಸು" ಎಂದು ಅರ್ಥ ಕೊಡುತ್ತದೆ.

ಯೋನಾತಾನನು "[ದಾವೀದನನ್ನು] *ದೇವರಲ್ಲಿ* ಬಲಪಡಿಸಿದನು." (ಒತ್ತಿ ಹೇಳಿದ್ದು ನನ್ನದು.) ದೇವರ ಯೋಜನೆಗಳನ್ನು ಮತ್ತು ವ್ಯವಸ್ಥೆಯನ್ನು ಕುರಿತು ದಾವೀದ ನನ್ನು ಬಲಪಡಿಸಿದನು. ದಾವೀದನೊಂದಿಗೆ ತನ್ನ ಅನಿಸಿಕೆಗಳನ್ನು, ಹೇಗೆ ದೇವರು ಅವನಿಗೆ ಜಯ ಕೊಡುತ್ತಾನೆ ಮತ್ತು ತನ್ನ ತಂದೆಯ ಎಲ್ಲಾ ಪ್ರಯತ್ನಗಳು ವಿಫಲವಾಗುವದು ಖಂಡಿತ

ವೆಂದು ಹಂಚಿಕೊಂಡನು: "ಭಯಪಡಬೇಡ; ನೀನು ನನ್ನ ತಂದೆಯಾದ ಸೌಲನ ಕೈಗೆ ಸಿಕ್ಕಿ ಬೀಳುವದಿಲ್ಲ; ನೀನು ಇಸ್ರಾಯೇಲ್ಯರ ಅರಸನಾಗುವಿ; ನಾನು ನಿನಗೆ ಎರಡನೇಯವನಾಗಿರು ವೆನು[37]; ಹೀಗಾಗುವದೆಂದು ನನ್ನ ತಂದೆಯಾದ ಸೌಲನೂ ತಿಳಿದು ಕೊಂಡಿದ್ದಾನೆ" (23:17; 1 ಸಮುವೇಲ 24:16-20 ನೋಡಿರಿ).

ಅಂಥ ಸ್ನೇಹಿತರು ಎಷ್ಟು ವಿಶೇಷವಾಗಿದ್ದಾರೆ! ಸಕಾರಾತ್ಮಕವಾಗಿರುವ, ಮೇಲೆ ಎತ್ತುವ ಮತ್ತು ಉತ್ತೇಜಿಸುವ ಜನರ ಸುತ್ತಲೂ ಇರುವದಕ್ಕೆ ನೀವು ಸಂತೋಷ ಪಡುವದಿ ಲ್ಲವೇ?[38] ಮಿತ್ರರು ಒಬ್ಬರನ್ನೊಬ್ಬರು ಕಟ್ಟುತ್ತಾರೆ. ಈವತ್ತು ನಾನು ನಿರಾಶೆಯಲ್ಲಿದ್ದರೆ, ನನ್ನ ಮಿತ್ರನು ನನ್ನನ್ನು ಎತ್ತುತ್ತಾನೆ. ನಾಳೆ ನನ್ನ ಸ್ನೆಹಿತನು ನಿರಾಶೆಯಲ್ಲಿದ್ದರೆ, ನಾನು ಅವನನ್ನು ಆನಂದಗೊಳಿಸು ತ್ತೇನೆ. ಒಬ್ಬರಿಗೊಬ್ಬರು ಸಹಾಯ ಮಾಡುವದೇ ಸ್ನೇಹ.

ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮನ್ನು ಕರ್ತನಲ್ಲಿ ಬಲಪಡಿಸುವ ಯೋನಾತಾನನಂಥ ಸ್ನೇಹಿ ತರು ನಮಗೆ ಬೇಕು - "*ಕರ್ತನಿಗೆ* ನಂಬಿಗಸ್ತರಾಗಿರುವದಕ್ಕೆ ಉತ್ತೇಜಿಸುವವರು." ಕೆಲವು ಮಿತ್ರರು ದೇವರ ಸೇವೆಯನ್ನು ಮಾಡುವದಕ್ಕೆ ಸರಳವಾಗುವಂತೆ ಮಾಡು ತ್ತಾರೆ (ಅಪೋ ಸ್ತಲರ ಕೃತ್ಯಗಳು 10:24). ಮತ್ತು ಕೆಲ ಸ್ನೇಹಿತರು ಕಷ್ಟಕರವಾಗುವಂತೆ ಮಾಡುತ್ತಾರೆ (2 ಸಮುವೇಲ 13:3). "ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ" ಪೌಲನು ಎಚ್ಚರಿಸಿದನು (1 ಕೊರಿಂಥ 15:33). ನಿಮ್ಮ ಸ್ನೇಹಿತರನ್ನು ಎಚ್ಚರಿಕೆಯಿಂದ ಆಯ್ದುಕೊಳ್ಳಿರಿ; ನೀವು ನಿತ್ಯತ್ವವನ್ನು ಎಲ್ಲಿ ಕಳೆಯುತ್ತೀರಿ ಎಂದು ನಿರ್ಧರಿಸಲು ಅವರು ಸಹಾಯ ಮಾಡು ತ್ತಾರೆ.

ಈ ಸಮಯದಲ್ಲಿ, ದುಃಖ ಮತ್ತು ಬೀಳ್ಕೊಡುಗೆಯ ಕಣ್ಣೀರು ನಮ್ಮ ಕಲ್ಪನೆಗಳಿಗೆ ಬಿಟ್ಟದ್ದು. ಯೋನಾತಾನ ಮತ್ತು ದಾವೀದ ತಮ್ಮ ಒಡಂಬಡಿಕೆಯನ್ನು ನವೀಕರಿಸಿದರು; "ದಾವೀ ದನು ಹೋರೆಷದಲ್ಲಿ ಉಳುಕೊಂಡನು, ಯೋನಾತಾನನು ತನ್ನ ಮನೆಗೆ ಹಿಂತಿರುಗಿದನು" (1 ಸಮುವೇಲ 23:18). ಇನ್ನೆಂದೂ ನೋಡದಂತೆ ಅವರು ಅಗಲಿದರು.

## ಮಿತ್ರತ್ವದ ವೇದನೆ (2 ಸಮುವೇಲ 1)

ನೀವು ಇನ್ನೊಬ್ಬರಿಗೆ ನಿಮ್ಮನ್ನು ತೆರೆದಿಡುವಾಗ, ನಿಮ್ಮನ್ನು ನೀವು ದುರ್ಬಲರನ್ನಾಗಿ ಮಾಡಿಕೊಳ್ಳುತ್ತೀರಿ. ನಿಮ್ಮ ಹೃದಯವನ್ನು ಗೆರೆಯ ಮೇಲೆ ಹಾಕುವಾಗ, ಅದು ತುಳಿಯಲ್ಪಡುವದು. ಒಂದೇ ಮಾರ್ಗವೆಂದರೆ, ನಿಮ್ಮ ಹೃದಯವನ್ನು ಒಂದು ಗಾಳಿಯಿಲ್ಲದ, ಧೂಳಿನಿಂದ ತುಂಬಿದ ಸ್ಥಳದಲ್ಲಿ ಬಂದು ಮಾಡಿಡುವದು. ಅಲ್ಲಿ ಅದು ಉಸಿರುಗಟ್ಟುವದು ಮತ್ತು ಸಾಯುವದು. ನಿಮ್ಮ ಹೃದಯಕ್ಕೆ ವೇದನೆ ತಿಳಿಯಲಿಕ್ಕಿಲ್ಲ, ಆದರೆ ಅದಕ್ಕೆ ಆನಂದವೂ ತಿಳಿಯುವದಿಲ್ಲ. ನಿಮ್ಮ ಜೀವನವನ್ನು ಇನ್ನೊಬ್ಬರಿಗೆ ಒಪ್ಪಿಸಿಕೊಡಿರಿ; ಜೀವಿಸಲು ಅದೊಂದೇ ಮಾರ್ಗ.

ನಾವು ದಾವೀದ ಮತ್ತು ಯೋನಾತಾನರ ಕಣ್ಣೀರನ್ನು ನೋಡಿದ್ದೇವೆ; ಅವರ ವೇದ ನೆಯ ಅಗಲುವಿಕೆಯನ್ನು ನೋಡಿದ್ದೇವೆ. ಈಗ ನಾವು ಯೋನಾತಾನ ಮತ್ತು ದಾವೀದರ ಕಹಿಸಿಹಿ ಸ್ನೇಹದ ಕೊನೆಯ ಅಧ್ಯಾಯಕ್ಕೆ ಬಂದಿರುವಾಗ, ಅದು ವೇದನೆಯಿಂದ ತುಂಬಿದ ಘಟನೆಯಾಗಿದೆ.

ದಾವೀದ ಮತ್ತು ಅವನ ಜನರ ಗುಂಪು ಅಮಾಲೇಕ್ಯರೊಡನೆ ಯುದ್ಧ ಮಾಡಿಬಂದು ಇನ್ನೂ ಸುದಾರಿಸಿಕೊಳ್ಳುತ್ತಿರುವಾಗ, ಇಸ್ರಾಯೇಲ್ಯರ ಮತ್ತು ಫಿಲಿಷ್ಟಿಯರ ಮಧ್ಯ ಭಯಂಕರ ಕಾಳಗ ನಡೆಯುತ್ತಿರುವದರ ಸುದ್ದಿ ಸಿಕ್ಕಿತು. ಭಯದಿಂದ ದಾವೀದನು ಸುದ್ದಿ ತಂದವನನ್ನು, "ಕಾರ್ಯವೇನಾಯಿತು?" ಎಂದು ಕೇಳಿದನು (1:4ಎ).

ಆ ಯೌವನಸ್ಥನ ಮಾತುಗಳು ದಾವೀದನ ಹೃದಯದಲ್ಲಿ ಒಂದು ಅಲಗು ನಟ್ಟಂತಾಯಿತು: "ಅನೇಕರು ಮಡಿದರು. ಸೌಲನೂ ಅವನ ಮಗನಾದ ಯೋನಾತಾನನೂ

ಮೃತಿ ಹೊಂದಿದರು" (1:4ಬಿ).

ದಾವೀದನು ಅದನ್ನು ನಂಬಲು ಇಷ್ಟಪಡಲಿಲ್ಲ (1:5). ಆದಾಗ್ಯೂ, ದಾವೀದನಿಗೆ ಆ ಮನುಷ್ಯನು ತಾನು ನೋಡಿದ್ದರ ಸಾಕ್ಷಿಯನ್ನು ಕೊಟ್ಟಾಗ, ತನ್ನ ಮಿತ್ರನು ಇನ್ನಿಲ್ಲವೆಂದೂ ಅವನಿಗೆ ಗೊತ್ತಾಯಿತು.

> ಸೌಲನೂ ಅವನ ಮಗನಾದ ಯೋನಾತಾನನೂ ಯೆಹೋವನ ಪ್ರಜೆಗಳಾದ ಇಸ್ರಾಯೇಲ್ಯರೂ ಕತ್ತಿಯಿಂದ ಸಂಹೃತರಾದದ್ದಕ್ಕಾಗಿ ದಾವೀದನೂ ಅವನ ಜನರೂ ತಮ್ಮ ಬಟ್ಟೆಗಳನ್ನು ಹರಿದುಕೊಂಡು ಗೋಳಾಡಿ ಅತ್ತು ಸಾಯಂಕಾಲದವರೆಗೆ ಉಪವಾಸ ಮಾಡಿದರು (1:11, 12).

ದಾವೀದನು 1:19-27ರಲ್ಲಿ ಒಂದು ಸುಂದರವಾದ ಸ್ಮಾರಕ ಗೀತೆಯನ್ನು ಬರೆದನು. ಆ ಶೋಕಗೀತೆಯು ಸೌಲ ಮತ್ತು ಯೋನಾತಾನ ಇಬ್ಬರನ್ನೂ ನಮೂದಿಸುತ್ತದೆ - ಆದರೆ ದಾವೀದನ ಮೂಲ ಉದ್ದೇಶವು ಅದರ ತಲೆಬರಹದಲ್ಲಿ ಪ್ರಕಟವಾಗಿದೆ: "ಬಿಲ್ಲೆಂಬ ಶೋಕ ಗೀತೆ" (1:18). ಬಿಲ್ಲು ಯೋನಾತಾನನ ಗುರುತಾಗಿತ್ತು, ಸೌಲನದಲ್ಲ. ಸ್ನೇಹಿತರಿಗೋಸ್ಕರ ಅನೇಕ ಸ್ಮಾರಕಗಳು ಸಂಗಮವರಿ ಕಲ್ಲಿನಲ್ಲಿ ಸ್ಥಾಪಿಸಲ್ಪಟ್ಟಿವೆ. ಆದರೆ, ಯೋನಾತಾನನಿಗೆ ದಾವೀದನ ಸಲ್ಲಿಸಿದ ಕೋಮಲವಾದ ಶ್ಲಾಘನೆಯನ್ನು ಯಾವದೂ ಮೀರಿಸಲಾರದು.

ಆ ಗೀತೆಯಲ್ಲಿ ದಾವೀದನು, ಯೋನಾತಾನ ಮತ್ತು ಅವನ ತಂದೆಯ ಯುದ್ಧ ಪರಕ್ರಮವನ್ನು ಹಾಡಿದ್ದಾನೆ (1:22). ಯೋನಾತಾನನ ನಂಬಿಗಸ್ತಿಕೆಯನ್ನು ಮತ್ತು ಅವನ ತಂದೆಯ ವಿಷಯದಲ್ಲಿನ ನಿಷ್ಠೆಯನ್ನು ಶ್ಲಾಘಿಸಿದ್ದಾನೆ (1:23). ಎಲ್ಲಕ್ಕಿಂತ ಹೆಚ್ಚಾಗಿ, ದಾವೀದನು ತನ್ನ ಹಾನಿಯ ಕುರಿತು ಹಾಡಿದ್ದಾನೆ:

> ಅಯ್ಯೋ, ಪರಾಕ್ರಮಶಾಲಿಗಳೇ, ಯುದ್ಧದಲ್ಲಿ ಹೇಗೆ ಮಡಿದು ಹೋದಿರಿ!
> ಯೋನಾತಾನನು ನಿಮ್ಮ ಬೆಟ್ಟಗಳಲ್ಲಿ ಹತನಾಗಿ
> ಬಿದ್ದಿದ್ದಾನಲಾ. ಯೋನಾತಾನನೇ, ನನ್ನ ಸಹೋದರನೇ,
> ನಿನಗೋಸ್ಕರ ನನ್ನಲ್ಲಿ ಬಹು ಸಂಕಟವುಂಟಾಗಿದೆ;
> ನೀನು ನನಗೆ ಬಹು ಮನೋಹರನಾಗಿದ್ದಿ.
> ನನ್ನ ಮೇಲಿದ್ದ ನಿನ್ನ ಪ್ರಿತಿಯು ಆಶ್ಚರ್ಯಕರವಾದದ್ದೇ ಸರಿ;
> ಅದು ಸತೀ ಪ್ರೇಮಕ್ಕಿಂತ ಶ್ರೇಷ್ಠವಾದದ್ದು.[39]
> ಅಯ್ಯೋ, ಪರಾಕ್ರಮಶಾಲಿಗಳು ಹೇಗೆ ಹತರಾದರು!
> ಯುದ್ಧಾಯುಧಗಳು ಹೇಗೆ ಹಾಳಾದವು! (1:25-27).

ಹೌದು, ನೀವು ಅತಿ ಸಮೀಪದ ಸ್ನೇಹವನ್ನು ಮಾಡಿಕೊಳ್ಳುವಾಗ, ನೀವು ವೇದನೆಗೆ ನಿಮ್ಮನ್ನು ತೆರೆದಿಡುವಿರಿ. ತನ್ನ ಹೃದಯವು ಮುರಿದುಹೋದದ್ದರಿಂದ, ಯೋನಾತಾನನೊಂದಿನ ತನ್ನ ಸ್ನೇಹಕ್ಕೋಸ್ಕರ ದಾವೀದನು ಗೋಳಾಡಲಿಲ್ಲ. ಬದಲಾಗಿ, ಆ ಸ್ನೇಹವನ್ನು ಅವನು ಆಚರಿಸಿದನು ಮತ್ತು ಅದರ ಅಮೂಲ್ಯ ನೆನಪುಗಳನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡನು. ಇದೇ ಜೀವಿಸಲು ಒಂದೇ ಮಾರ್ಗವೆಂದು ನಾನು ಹೇಳುತ್ತೇನೆ.

## ಮುಕ್ತಾಯ

ಈ ಪಾಠವು ಸ್ನೇಹಕ್ಕೊಂದು ಸ್ಮಾರಕವಾಗಿದೆ, ಆದರೆ ಅದಕ್ಕಿಂತಲೂ ಹೆಚ್ಚಿನದಾಗಿದೆ ಎಂದು ನಾನು ನಂಬುತ್ತೇನೆ. ಅದು ನಮ್ಮೆಲ್ಲರಿಗೆ ಒಂದು ಸವಾಲಾಗಿದೆಯೆಂದು ನಾನು ಪ್ರಾರ್ಥಿಸುತ್ತೇನೆ.

ಅನೇಕ ವರ್ಷಗಳ ಹಿಂದೆ, ಒಂದು ಪಟ್ಟಣದ ಬಡ ಪ್ರದೇಶಕ್ಕೆ ಭೇಟಿಕೊಡಲು ವಾಹನ ದಲ್ಲಿ ಹೋದ ಒಬ್ಬ ಬೋಧಕರ ಕತೆಯನ್ನು ಕೇಳಿದ್ದೇನೆ. ಅವರು ಭೇಟಿ ಕೊಟ್ಟ ಮನೆಯ ಹೊರಗೆ ಬಂದಾಗ, ಹರಿದ ವಸ್ತ್ರಗಳನ್ನು ಧರಿಸಿದ್ಧ ಒಬ್ಬ ಬಾಲಕನು ತಮ್ಮ ಹೊಸ ಕಾರನ್ನು ಪ್ರಶಂಸಿಸುವದನ್ನು ನೋಡಿದರು. "ಇದು ಉತ್ತಮ ಕಾರು ಸಾರ್!" ಬಾಲಕ ಹೇಳಿದ. ಸ್ವಲ್ಪ ವಿವರಣೆಯ ಅಗತ್ಯವಿದೆ ಎಂದು ತಿಳಿದ ಬೋಧಕರು, "ನಾನು ಇಂಥ ಕಾರನ್ನು ಕೊಳ್ಳುವ ಯೋಗ್ಯತೆ ನನ್ನಲ್ಲಿ ಇರಲಿಲ್ಲ. ಆದರೆ ಕಾರಿನ ವ್ಯಾಪಾರ ದಲ್ಲಿರುವ ನನ್ನ ಒಬ್ಬ ಸ್ನೇಹಿತರು, ನಾನು ಮಾಡುವ ಕೆಲಸವನ್ನು ಮಾಡುವಂತೆ ಇದನ್ನು ನನಗೆ ಕೊಟ್ಟರು" ಎಂದು ಹೇಳಿದರು. ಆ ಹುಡುಗನು ಸ್ವಲ್ಪ ಆಲೋಚನೆ ಮಾಡಿ, "ನಾನು ಅಂಥ ಸ್ನೇಹಿತನಾಗುವಂತೆ ಆಶಿಸು ತ್ತೇನೆ!" ಅಂದನು.

ಮೊದಲ ಬಾರಿಗೆ ನಾನು ಈ ಕತೆಯನ್ನು ಕೇಳಿದಾಗ, "ನನಗೂ ಒಬ್ಬ ಅಂಥ ಸ್ನೇಹಿತ ನಿದ್ದರೇ" ಎಂದು ಆ ಬಾಲಕನು ಹೇಳಬಹುದೆಂದು ನೆನೆಸಿದ್ದೆನು. "ನಾನು ಅಂಥ ಸ್ನೇಹಿತ ನಾಗು*ವಂತೆ* ಆಶಿಸುತ್ತೇನೆ!" ಈ ಮಾತುಗಳು ನನ್ನ ಮನ ಮುಟ್ಟಿದವು.

"ನಿಷ್ಠೆ," "ನಿಸ್ವಾರ್ಥ," "ಪರೀಕ್ಷೆಗಳು ಎದುರಾಗುವಾಗ ಅದನ್ನು ಎದುರಿಸುವ ಸಾಮರ್ಥ್ಯ," "ಮುಕ್ತತನ," "ಸ್ಥಿರತೆ," ಮತ್ತು "ಉತ್ತೇಜನ," ಎಂಬ ಪದಗಳನ್ನು ಉಪಯೋ ಗಿಸಿ ನಿಜವಾದ ಸ್ನೇಹವನ್ನು ನಾನು ವಿವರಿಸುವಾಗ, "*ಅಂಥ* ಸ್ನೇಹಿತ ನನಗಿದ್ದರೇ," ಎಂದು ನಾವು ಆಲೋಚಿಸಿರಬಹುದು. ಹಾಗಿದ್ದರೆ, ನಮ್ಮ ಆಲೋಚನೆಗಳನ್ನು ಬದಲಾಯಿಸಿಕೊಂಡು "ನಾನು ಅಂಥ ಸ್ನೇಹಿತನಾಗ*ಬೇಕು*" ಎಂದು ಆಲೋಚಿಸೋಣ. ಈ ಪಾಠದ ಮೊದಲಿಗೆ ನಾನು ವ್ಯಕ್ತ ಪಡಿಸಿದಂತೆ, ಇದನ್ನು ಓದುವವರೆಲ್ಲರಿಗೆ ಇದು ಸಹಾಯ ಅದರಲ್ಲೂ ವಿಶೇಷ ವಾಗಿ, ಮಿತ್ರರಿಲ್ಲವೆಂದು ಕೊಳ್ಳು ವವರಿಗೆ ಸಹಾಯ ಮಾಡಲಿ. ನಿಮಗೆ ಎರಡು ಸಂಗತಿಗಳನ್ನು ಹೇಳಬಯಸುತ್ತೇನೆ.

ಮೊದಲು, ನಿಮಗೆ ಸ್ನೇಹಿತರಿಲ್ಲದಿದ್ದರೆ, ಯಾರಿಗೆ ಮಿತ್ರನ *ಅವಶ್ಯಕತೆಯಿದೆಯೋ* ಅಂಥವನನ್ನು ಹುಡುಕಿರಿ ಮತ್ತು ನಾವು ಮಾತನಾಡಿದಂಥ ಸ್ನೇಹಿತನು ನೀವಾಗಿರಿ. "ಮಿತ್ರರು ಇರುವ ಮನುಷ್ಯನು, ಸ್ನೆಹಪರನಾಗಿ ತೋರಿಬರಬೇಕು" ಎನ್ನುವ ಮಾತು ಈಗಲೂ ಸತ್ಯವಾ ಗಿದೆ.[40]

ಎರಡನೇದಾಗಿ (ಮತ್ತು ಪ್ರಾಮುಖ್ಯವಾಗಿ), ನಾವು ವಿವರಿಸಿದ ಎಲ್ಲಾ ಗುಣಗಳಿರುವ ಒಬ್ಬ ಮಿತ್ರನು *ನಮಗೆಲ್ಲಾ* ಇದ್ದಾನೆ - "ಸುಂಕದವರ ಮತ್ತು ಪಾಪಿಗಳ ಸ್ನೇಹಿತ"ನೆಂದು ಕರೆ ಯಲ್ಪಟ್ಟವನು (ಮತ್ತಾಯ 11:19; ಲೂಕ 7:34), ತನ್ನ ಹಿಂಬಾಲಕರನ್ನು ತನ್ನ "ಸ್ನೇಹಿತ ರೆಂದು" ಕರೆದವನು (ಲೂಕ 12:4; ಯೋಹಾನ 15:15). ಆತನು ನಿಮ್ಮ ಮಿತ್ರನಾಗಿದ್ದಾನೋ? ಆತನು ಹೇಳಿದ್ದನ್ನು ನೆನಪು ಮಾಡಿಕೊಳ್ಳಿರಿ, "ನಾನು ನಿಮಗೆ ಕೊಟ್ಟ ಆಜ್ಞೆಗಳಿಗೆ ಸರಿಯಾಗಿ ನೀವು *ನಡೆದರೆ* ನೀವು ನನ್ನ ಸ್ನೇಹಿತರು" (ಯೋಹಾನ 15:14). ನಾವು ಅನೇಕ ಸ್ನೇಹಿತ ರನ್ನು ಪಡೆಯಬಹುದು ಅಥವಾ ಪಡೆಯಲಿಕ್ಕಿಲ್ಲ, ಆದರೆ ಈ ಸ್ನೇಹಿತನನ್ನು ಮಾತ್ರ ನಾವು *ಪಡೆದುಕೊಳ್ಳಲೇ* ಬೇಕು!

---

ಟಿಪ್ಪಣಿಗಳು

[1]ಸತ್ಯವೇದದ ಸೂಚನೆಗಳ ಹೊರತಾಗಿ, ಮೊದಲ ವಾಕ್ಯಭಾಗದಲ್ಲಿನ ವಾಕ್ಯಗಳು ಫ್ರಾಂಕ್ ಕ್ರೇನ್ ಅವರ, *A Friend Like You* (Heartland Samplers, Inc., 1991), devotional calendar.
[2]ಮಾರುಕಟ್ಟೆಯಲ್ಲಿ ಈ ಪುಸ್ತಕವು ದ ಫ್ರೆಂಡ್‌ಲೆಸ್ ಅಮೇರಿಕನ ಮೇಲ್ ಎಂಬ ತಲೆಬರಹದಲ್ಲಿದೆ.
[3]ದಾವೀದನು ಸೌಲನಿಗೆ ನಿಮಿತ್ತವಾಗಿ ಕಿನ್ನರಿಯನ್ನು ಬಾರಿಸುತ್ತಿದ್ದರೂ, ಸೌಲನಿಗೆ ದಾವೀದನು ಯಾರ ೦ದು ಹೇಗೆ ಗೊತ್ತಿರಲಿಲ್ಲ ಎಂಬ ಪ್ರಶ್ನೆ ಬರುತ್ತದೆ (ಹೋಲಿಸು 1 ಸಮುವೇಲ 16:23; 17:15). ಅದಕ್ಕೆ ಅನೇಕ ವಿವರಣೆಗಳುಂಟು. ಸೌಲಿಗೋಸ್ಕರ ಕಿನ್ನರಿ ಬಾರಿಸಿ ಬಹುದಿನಗಳಾಗಿರಬಹುದು - ಮತ್ತು

ದಾವೀದನ ರೂಪದಲ್ಲಿ ಬದಲಾವಣೆಯಾಗಿರಬಹುದು. (ಅವನಿಗೆ ನಂತರ ಗಡ್ಡಬಿತ್ತೆಂದು ಹೇಳ ಲಾಗುತ್ತದೆ - 1 ಸಮು ವೇಲ 21:13; ಬಹುಶಃ ಅವನು ಆಗಲೇ ಅದನ್ನು ಬೆಳೆಸುತ್ತಿರಬಹುದು.) ಸೌಲನು ಹೆಚ್ಚು ಕಡಿಮೆ ಮಾನಸಿಕವಾಗಿದ್ದುದರಿಂದ, ಅವನ ನೆನಪಿನ ಶಕ್ತಿಯು ಕಡಿಮೆಯಾಗಿರಬಹುದು. ಆದ ರೆ ಅತ್ಯುತ್ತಮ ವಿವರಣೆಯು ಈ ಪಾಠದ ಸಾರದಲ್ಲಿ ಕೊಡಲಾಗಿದೆ: ಸೌಲನು ದಾವೀದನು ಯಾರೆಂದು ಕೇಳಲಿಲ್ಲ, ಆದರೆ ದಾವೀದನನ್ನು ಅರಮನೆಯೊಳಗೆ ತೆಗೆದುಕೊಳ್ಳುವದಕ್ಕಿಂತ ಮೊದಲು ಅವನ ತಂದೆಯಾರೆಂದು ಕೇಳಿದನು. [4]ಸೌಲನು ದಾವೀದನ ತಂದೆ ಯಾರೆಂದು ಮೊದಲೇ ಕೇಳಿದ್ದನು (1 ಸಮುವೇಲ 16:18-22). ಆದಾಗ್ಯೂ, ಹೆಸರುಗಳನ್ನು ನೆನಪಿಡಲು ಕಷ್ಟಪಡುವ ವ್ಯಕ್ತಿಯಾಗಿ (ಅದರಲ್ಲೂ ವಿಶೇಷವಾಗಿ ಪ್ರತಿದಿನ ನಾನು ಬಳಸದವುಗಳು), ಸೌಲನು ಹೇಗೆ ಮರೆತಿರಬಹುದೆಂದು ನಾನು ಅರ್ಥಮಾಡಿಕೊಳ್ಳಬಲ್ಲೆನು. [5]ಈ ಒಂದು *ಸಮಯದಲ್ಲಿ* ಸೌಲನು ಇಷಯನ ಬಳಿಗೆ ಕಳುಹಿಸಿ, "ನಾನು ದಾವೀದನನ್ನು ಮೆಚ್ಚಿದ್ದೇನೆ; ಅವನು ನನ್ನ ಸನ್ನಿಧಿಯಲ್ಲಿ ಸೇವೆ ಮಾಡಲಿ" ಅಂದನು (1 ಸಮುವೇಲ 16:22). [6]ಯೋನಾತಾನ ಅಂದರೆ "ಯೆಹೋವನೇ ಕೊಟ್ಟಿದ್ದಾನೆ." [7]ದಾವೀದನು ತನ್ನನ್ನು ಯೋನಾತಾನನ ಸೇವಕನೆಂದು ಹೇಳಿಕೊಳ್ಳುವದನ್ನು ಮುಂದುವರಿಸಿದ್ದನ್ನು ಗಮನಿಸಿರಿ (1 ಸಮುವೇಲ 20:8). [8]1 ಸಮುವೇಲ 20:23 ನೋಡಿರಿ. "*ಯೆಹೋವನ* ಒಡಂಬಡಿಕೆ" ಎಂದು ಕರೆಯಲಾಯಿತೆಂದು ಗಮನಿಸಿರಿ (1 ಸಮುವೇಲ 20:8). [9]1 ಸಮುವೇಲ 13:22 ನೋಡಿರಿ - ಇಸ್ರಾಯೇಲ್ಯರು ಕೆಲವು ಕತ್ತಿಗಳನ್ನು ಫಿಲಿಷ್ಟಿಯರೊಡನೆಯ ತಮ್ಮ ಮುಂದಿನ ಜಯದಲ್ಲಿ ಎತ್ತಿಕೊಳ್ಳುವರು ಎಂದು ಊಹಿಸಬಹುದು. ನಂತರ ದಾವೀದ ಮತ್ತು ಅವನ ಜನರ ಹತ್ತಿರ ನಾಲ್ಕು ನೂರು ಕತ್ತಿಗಳಿದ್ದವು (1 ಸಮುವೇಲ 25:13). [10]ಯೋನಾತಾನನ ಕಾರ್ಯವನ್ನು ವಿವರಿಸುವದಕ್ಕೆ ನಾವು ಉಪಯೋಗಿಸುವ ಮಾತು, "ಅವನು ತನ್ನ ಬೆನ್ನ ಮೇಲಿನ ಅಂಗಿಯನ್ನೂ ಕೊಟ್ಟನು."

[11]ಯೋನಾತಾನನು ದಾವೀದನಿಗೆ ಓಡೆತನ ಕೊಟ್ಟನು; ಕೊಡುವದಕ್ಕೆ ಏನೂ ಇಲ್ಲದ ದಾವೀದನು ತನ್ನನೇ ಕೊಟ್ಟನು. [12]James Burton Coffman, *Commentary on First Samuel* (Abilene, Tex.: ACU Press, 1992), 215. [13]ದಾವೀದನು ಮಾಡಿದ್ದೆಲ್ಲವೂ, ಸೌಲನ ಪರವಾಗಿಯೇ ಪ್ರತಿಬಿಂಬಿಸಿತು. [14]ಮಾತಾಡದ, ಆದರೆ ಅರ್ಥಮಾಡಿಕೊಂಡ ವಿವಾದವು ಯೋನಾತಾನನ ಪ್ರಶ್ನೆಯಲ್ಲಿತ್ತು. ಸೌಲನು ದಾವೀದನನ್ನು ಯಾವ ಕಾರಣವಿಲ್ಲದೇ ಮರಣಕ್ಕೆ ಒಪ್ಪಿಸಿದರೆ, ಅದುರಾಜ್ಯ ದಲ್ಲೆಲ್ಲಾ ಅಸಮಧಾನವನ್ನು ಸೃಷ್ಟಿಸುತ್ತಿತ್ತು. ಯಾರೂ ತಮ್ಮನ್ನು ಸುರಕ್ಷಿತರೆಂದು ಭಾವಿಸುತ್ತಿರಲಿಲ್ಲ. [15]ಸೌಲನು ಯಥಾರ್ಥವಾಗಿ ಪ್ರತಿಜ್ಞೆಯನ್ನು ಮಾಡುತ್ತಿದ್ದಾನೋ ಎಂಬ ಪ್ರಶ್ನೆ ಬರುತ್ತದೆ. [16]ಮುಂದಿನ ಪಾಠವನ್ನು ನೋಡಿರಿ, "ಕೆಟ್ಟ ಸಮಯಗಳಲ್ಲಿ ಹೇಗೆ ಬದುಕಬಹುದು." [17]ಸೌಲನು "ಸಮುವೇಲನ ಮುಂದೆ ಪ್ರವಾದಿಸಿದನು" ಎಂದು ವಾಕ್ಯ ಭಾಗವು ಹೇಳುತ್ತದೆ (1 ಸಮುವೇಲ 19:24). "ಪ್ರವಾದಿ ಸಿದನು" ಎಂಬ ಪದವು, ನಕಾರಾತ್ಮಕವಾಗಿಯೂ ಉಪಯೋಗಿ ಸಬಹುದು. ಅದೇ ಪದವು ಮೂಲ ಭಾಷೆಯಲ್ಲಿ ಉಪಯೋಗಿಸಲ್ಪಟ್ಟಿದೆ 1 ಸಮುವೇಲ 18:10 ಮತ್ತು "ಆರ್ಭಟಿಸು" ಎಂದು NASBಯಲ್ಲಿದೆ: "ಅವನು ಮನೆಯ ಮಧ್ಯದಲ್ಲಿ ಆರ್ಭಟಿಸಿದನು." ಸೌಲನು ನಾಯೋತಿನಲ್ಲಿ ಇಪ್ಪತ್ನಾಲ್ಕು ತಾಸುಗಳ ವರೆಗೆ ಬೆತ್ತಲೆಯಾಗಿ ಬಿದ್ದುಕೊಂಡು ಏನು ಮಾಡಿದನೆಂದು ಕೆಲವು ಪ್ರಶ್ನೆಗಳು ಉದ್ಭವಿಸುತ್ತವೆ. [18]ಯೋ ಜನೆಯ ಎರಡನೇಯ ಉದ್ದೇಶವು, ತನ್ನ ಮನಸ್ಸಿನಲ್ಲಿಯೇ ತಾನು ಸೌಲನ ಎದುರು ಎಲ್ಲಿದ್ದೇನೆ ಎಂದು ತಿಳುಕೊಳ್ಳುವದಕ್ಕೆ ಇತ್ತು. ತನ್ನ ಜೀವದ ಮೇಲೆ ಆದ ದಾಳಿಯ ಕೇವಲ ಸೌಲನ ತಾತ್ಕಾಲಿಕವಾದ ಹುಚ್ಚುತನವಾಗಿರಬಹುದು ಮತ್ತು ಸೌಲ ಪ್ರಾಮಾಣಿಕವಾದ ಉದ್ದೇಶಗಳನ್ನು ಪ್ರತಿನಿಧಿಸಲಿಲ್ಲ. ಹಿಂದೊಮ್ಮೆ ಸೌಲನು ಅವನನ್ನು ಕೊಲ್ಲಲು ಮನಸ್ಸು ಮಾಡಿ ನಂತರ ಬಿಟ್ಟಂತೆ, ಬಹುಶಃ ಅವನು ಪುನಃ ಅರಸನೊಡನೆ ಒಂದಾಗುವ ಸಾಧ್ಯತೆ ಇತ್ತು. (ಸೌಲನು ದಾವೀದನನ್ನು ಹುಣ್ಣಿಮೆಯ ಉತ್ಸವದ ಭೋ ಜನಕ್ಕೆ ಬರಬಹುದೆಂದು ಅಪೇಕ್ಷಿಸಿದ್ದನು [1 ಸಮುವೇಲ 20:26, 27]ಮತ್ತು ಸೌಲನು "ತನ್ನ ತಾತ್ಕಾಲಿಕವಾದ ಹುಚ್ಚುತನವನ್ನು ಮುಂದಿಟ್ಟು ತನ್ನ ತಪ್ಪಿಲ್ಲವೆಂದು ಬೇಡಿಕೊಳ್ಳುವ ಆಲೋಚನೆಯಲ್ಲಿದ್ದನು.") [19]ದಾವೀದನ ಜೀವನವನ್ನು ನಾವು ಕಲಿಯುತ್ತಿರುವಾಗ, ಸುಳ್ಳು ಹೇಳುವದು ಮತ್ತು ಉಳಿದ ಮೋಸವನ್ನು ನೋಡುತ್ತೇವೆ. ದೇವರು ಸುಳ್ಳು ಹೇಳುವದನ್ನು ಒಪ್ಪುತ್ತಾನೆ ಎಂದು ನಾವು ಇದರಿಂದ ತಿಳಿಯಬಾರದು. ಅಲ್ಲಿ ಏನು ನಡೆಯಿತು ಎಂದು ಪ್ರೇರೇಪಿಸಲ್ಪಟ್ಟ ಬರಹಗಾರರು ದಾಖಲಿಸಿದ್ದಾರೆ, ತಾವು ಹೇಳಿದ ಎಲ್ಲಾ ಸಂಗತಿಗಳಿಗೆ ಒಂದು ಸಮಾನವಾದ ಒಪ್ಪಿಗೆಯನ್ನು ಸೂಚಿಸಿಲ್ಲ. [20]NIVಯಲ್ಲಿ "ಅವನು ತನ್ನ ಕೋಪವನ್ನು ಕಳಕೊಂಡರೆ" ಎಂದಿದೆ. ಸೌಲನು ಹಾಗೆಯೇ ಮಾಡಿದನು!

[21]ಯೋನಾತಾನನು, "ನನ್ನ *ತಂದೆಯೊಡನೆ ಯೆಹೋವನು* ಇದ್ದ ಹಾಗೆ ನಿನ್ನ ಸಂಗಡವೂ ಇರಲಿ" ಎಂದನು (ಒತ್ತಿ ಹೇಳಿದ್ದು ನನ್ನದು). ಯೆಹೋವನು ತನ್ನ ತಂದೆ ಸಂಗಡ ಹಿಂದೆ ಅವನು ಆಳುತ್ತಿದ್ದಾಗ - ಇನ್ನೂ ಅರಸೊತ್ತಿಗೆಯಿಂದ ತಳ್ಳಲ್ಪಡದೇ ಇದ್ದಾಗ, ಇದ್ದ ಹಾಗೆ ಎಂದು ಯೋನಾತಾನನು

ಸೂಚಿಸಿದನು. [22]ವಿಷಾದಕರವಾಗಿ ದಾವೀದನು ಅರಸನಾದಾಗ ಯೋನಾತಾನನು ಬದುಕಿರಲಿಲ್ಲ. [23]ಹೊಸದಾಗಿ ಅರಸನಾಗಿ ಪ್ರತಿಷ್ಟಿಸಲ್ಪಟ್ಟಾಗ, ತಮ್ಮ ವೈರಿಗಳಾಗಬಹುದಾದವರನ್ನು ಕೊಲ್ಲುವದು ಸಾಮಾನ್ಯವಾಗಿತ್ತು. [24]ಯೋನಾತಾನನು ತನ್ನ ಬೇಡಿಕೆಯಲ್ಲಿ ತನ್ನ "ಮನೆಯವರನ್ನು" ಒಳಗೊಂಡನು. ದಾವೀದನು ತಾನು ಯೋನಾತಾನನಿಗೆ ಮಾಡಿದ ಪ್ರತಿಜ್ಞೆಯನ್ನು ನಂತರದ ಸಮಯದಲ್ಲಿ ಅವನ ಮಗನನ್ನು ಗೌರವಿಸುವದರ ಮೂಲಕ (2 ಸಮುವೇಲ 9:7) ನೆನಪಿಸಿದನು. ಮತ್ತು ಅವನನ್ನು ಮರಣದಿಂದ ತಪ್ಪಿಸಿದನು (2 ಸಮುವೇಲ 21:7). [25]ಶುದ್ಧಾಚಾರದ ಪದ್ಧತಿಯು ಇಸ್ರಾಯೇಲ್ಯರನ್ನು ಧಾರ್ಮಿಕ ಉತ್ಸವಗಳಲ್ಲಿ ಪಾಲು ತೆಗೆದುಕೊಳ್ಳುವದಕ್ಕೆ ಅನರ್ಹರನ್ನಾಗಿ ಮಾಡಿತು (ಯಾಜಕಕಾಂಡ 7:20, 21). [26]"ಇಂಥವನ ಮಗನು" ಇದು ಇಬ್ರಿಯ ಪದದಲ್ಲಿ "ಸ್ವಭಾವದಲ್ಲಿ ಪಾಲುಗಾರರಾಗುವ" ಎಂಬ ಅರ್ಥ ಕೊಡುತ್ತದೆ. ಈ ಭಾವದ ನಿಜವಾದ ಅರ್ಥವು "ನೀವು ದುಷ್ಟ ಪ್ರತಿಭಟಿಸುವ" ಎಂದಿದೆ. ಆದ ರೆ ಇದು ಆದಕ್ಕಿಂತ ಹೆಚ್ಚು ಅವಮಾನ ವ್ಯಕ್ತಮಾಡುತ್ತದೆ. ಇಂದಿನ ದಿನಗಳ ಅಶ್ಲೀಲ ಪದಕ್ಕೆ ಹೋಲಿಸು ವದಾದರೆ "ಹೆಣ್ಣು ನಾಯಿಯ ಮಗನು" ಎಂದು ಅರ್ಥವಾಗುತ್ತದೆ. ಆದರೆ ಅದು ಒಂದು ಅವಮಾನಗಳಲ್ಲಿ ದೊಡ್ಡದು (ಈ ವಚನದ LBಯನ್ನು ನೋಡಿರಿ). [27]ಸೆಪ್ಟುಜಿನ್ಟ್‌ನ ಪ್ರಕಾರ, "ನೀವು ಇದರೊಂದಿಗೆ ಮಿತ್ರರನ್ನಾಗಿ ಮಾಡಿಕೊಂಡಿದ್ದೀರಿ" ಎಂದಿದೆ (NEBಯನ್ನು ನೋಡಿರಿ). NIVಯ ಪ್ರಕಾರ "ನೀವು ಇದರ ಪಕ್ಷದಲ್ಲಿದ್ದೀರಿ" ಎಂದು ಇದೆ. [28]ಯೋನಾತಾನನು ಜನಿಸಿದಾಗ ಅವನ ತಾಯಿಯ ಬೆತ್ತಲೆತನವು ಬಯಲಾದದ್ದರಿಂದ, ಈ ವಾಕ್ಯದ ಅರ್ಥವು, "ನಿನ್ನನ್ನು ಪಡೆದದ್ದಕ್ಕೆ ನಿನ್ನ ತಾಯಿಯು ನಾಚಿಕೆ ಪಡುತ್ತಾಳೆ" ಅಥವಾ, ಒಬ್ಬ ತಳ್ಳಲ್ಪಟ್ಟ ಅರಸನ ಪತ್ನಿಯರು, ಅವನ ಮುಂದಿನ ಅರಸನ ಪತ್ನಿಯರಾಗುತ್ತಾರೆ ಎಂದು ಅರ್ಥಕೊಡಬಹುದು (2 ಸಮುವೇಲ 12:18). [29]1 ಸಮುವೇಲ 20:34 ಯೋನಾತಾನನು ಊಟ ಮಾಡಲಾಗಲಿಲ್ಲವೆಂದು ಹೇಳುತ್ತದೆ. [30]ಯಾರಾದರೂ ಗಮನಿಸುತ್ತಿದ್ದಾರೆ ಎಂದು ಯೋನಾತಾನನಿಗೆ ಪುರಾವೆ ದೊರೆತಿದ್ದರೆ, ದಾವೀದನು ತೊಂದರೆಗೊಳಗಾಗದಂತೆ ಅವನು ತನ್ನ ಸೇವಕನೊಡನೆ ಪಟ್ಟಣಕ್ಕೆ ಹಿಂತಿರುಗಿ ಹೋಗುತ್ತಿದ್ದದರಲ್ಲಿ ಯಾವ ಸಂಶಯವಿಲ್ಲ - ನಮಗೆ ತದನಂತರದ ಮನಮುಟ್ಟುವ ಘಟನೆ ದೊರೆಯುತ್ತಿರಲಿಲ್ಲ.

[31]1 ಸಮುವೇಲ 20:41ರ ಪ್ರಕಾರ ದಾವೀದನು, "ಮೂರು ಬಾರಿ ಬೊಗ್ಗಿದನು" ಇದು ಯೋನಾತಾನನು ಅರಸನ ಮಗನು ಎಂಬದಕ್ಕೆ ವಿರುದ್ಧವಾಗಿರಬಹುದು. 1 ಸಮುವೇಲ 24:8 ಅಥವಾ ದೇವರಿಗೆ ಗೌರವ ವ್ಯಕ್ತಪಡಿಸುವದಕ್ಕಿರಬಹುದು (ದೇವರ ಚಿತ್ತ ನೆರವೇರಲಿ) - ಅಥ ವಾ ಎರಡೂ ಉದ್ದೇಶಗಳನ್ನು ಅದು ಒಳಗೊಂಡಿರಬಹುದು. [32]ಇಂದು ಜಗತ್ತಿನ ಅನೇಕ ಭಾಗಗಳಲ್ಲಿರುವಂತೆ, ಆ ದಿನಗಳಲ್ಲಿಯೂ ಕೆನ್ನೆಗೆ ಮುದ್ದುಕೊಡುವದು ಒಂದು ಸಾಮಾನ್ಯ ಪದ್ಧತಿಯಾಗಿತ್ತು. [33]Frank Crane, *A Friend Like You* (Heartland Samplers, Inc., 1991), devotional calendar. [34]ಸೂಚಿಸಿ 1 ಸಮುವೇಲ 23:17; 27:1; ಇತ್ಯಾದಿ. ಇನ್ನೂ ಅನೇಕ ವಾಕ್ಯಭಾಗಗಳು ದಾವೀದನು ತನ್ನ ಜೀವ ಭಯದಿಂದಾಗಿ ಓಡಿ ಹೋದನೆಂದು ಸೂಚಿಸುತ್ತದೆ. ಇಲ್ಲಿ ಕೊಡಲ್ಪಟ್ಟ ಎರಡೂ ವಿಶಿಷ್ಟವಾ ಗಿವೆ. [35]ದಾವೀದನನ್ನು ಹಿಡಿಯುವದರಲ್ಲಿ ಯೋನಾತಾನನು ಯಾವ ಪಾಲೂ ತೆಗೆದುಕೊಳ್ಳಲಿಲ್ಲವಾ ದ್ದರಿಂದ, ಅಧ್ಯಾಯ 20ರಿಂದ ಅಧ್ಯಾಯ 23ರ ಅಂತ್ಯದವರೆಗೆ ಅವನ ಹೆಸರು ಎಲ್ಲಿಯೂ ನಮೂದಿಸಿಲ್ಲ. [36]ದಾವೀದನಿಗೆ ಸಹಾಯ ಮಾಡಿದ್ದರಿಂದ ನೋಬದಲ್ಲಿದ್ದ ಯಾಜಕರನ್ನು ಸೌಲನು ಕೊಲ್ಲಿಸಿದನು. [37]"ನಾನು ನಿನಗೆ ಎರಡನೇಯವನಾಗಿರುವೆನು" ಎಂಬುದು ಬೇಡಿಕೆಯಾಗಿರಲಿಲ್ಲ ಬದಲಾಗಿ ಅದು ವಾಗ್ದಾನವಾಗಿತ್ತು. ಎರಡನೇಯ ಸ್ಥಾನದಲ್ಲಿ ತಾನು ತೃಪ್ತಿ ಪಡುವದಾಗಿ ಯೋನಾತಾನನು ದಾವೀದನಿಗೆ ವಾಗ್ದಾನ ಮಾಡಿದನು ಮತ್ತು ಏನೇ ಆದರೂ ಅವನನ್ನು ಬೆಂಬಲಿಸುವದಾಗಿ ಹೇಳಿದನು. ಆ ವಾಗ್ದಾನವನ್ನು ನೆರವೇರಿಸುವದಕ್ಕೆ ದುರದೃಷ್ಟವಾಗಿ ಯೋನಾತಾನನಿಂದ ಆಗಲಿಲ್ಲ. [38]ನಾವು ಇತರರಿಂದ ಬಲ ಪಡೆಯುವದರ ಕುರಿತು ಬೋಧಕರು ಪ್ರಸಂಗಿ 4:9-12ರಲ್ಲಿ ಮಾತಾಡಿದರು. [39]ದೇವರು ಸಲಿಂಗವಾದವನ್ನು ಒಪ್ಪುತ್ತಾನೆ ಎಂದು ಸಾಧಿಸುವದಕ್ಕೆ ಮತ್ತು ದಾವೀದ ಮತ್ತು ಯೋನಾತಾನರ ಮಧ್ಯೆ ಸಲಿಂಗಕಾಮದ ಸಂಬಂಧವಿತ್ತು ಎಂದು ತೋರಿಸುವದಕ್ಕೆ ಈ ಭಾಗವನ್ನು ಉಪಯೋಗಿಸುತ್ತಾರೆ. ಯೋನಾತಾನನ ಪ್ರೀತಿಯ ನಿಸ್ವಾರ್ಥ ಸ್ವಭಾವವನ್ನು ದಾವೀದನು ಸೂಚಿಸುತ್ತಾನೆಯೇ ಹೊರತು ಲೈಂಗಿಕ ಪ್ರೀತಿಯನ್ನಲ್ಲ. [40]ಜ್ಞಾನೋಕ್ತಿ 18:24; KJV; ಮತ್ತು NKJV. ಈ ಭಾಗದ ಕುರಿತು ಕಷ್ಟಗಳಿವೆ. ಇದನ್ನು ನವ ಭಾಷಾಂತಗಳು ವಿಭಿನ್ನವಾಗಿ ಭಾಷಾಂತರಿಸುತ್ತವೆ. ನಾನು ಅದನ್ನು ನಾಣ್ಣುಡಿಯಾಗಿ ಸೇರಿಸಿದ್ದೇನೆ, ವಾಕ್ಯಭಾಗವಾಗಿಯೋ ಅಥವಾ ಪದ್ಧತಿಯಾಗಿಯೋ.